ವಿರೋಧ ಪಕ್ಷವಾಗಿರುತ್ತದೆ. ಈ ಹಿನ್ನಲೆಯಲ್ಲಿ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಪ್ರಹ್ಲಾದ ಜೋಶಿ ಅವರು ದಿನಾಂಕ: 22.01.2014 ರಂದು ಪತ್ರವನ್ನು ನೀಡಿದ್ದು, ದಿನಾಂಕ: 14.05.2013 ರಂದು ನಡೆದ ಭಾರತೀಯ ಜನತಾ ಪಾರ್ಟಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಶ್ರಿ ಜಗದೀಶ್ ಶೆಟ್ಟರ್ ಅವರನ್ನು ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುತ್ತಾರೆಂದು ತಿಳಿಸಿ ಅಂಗೀಕರಿಸಲಾದ ನಿರ್ಣಯದ ಪ್ರತಿಯನ್ನು ನೀಡಿರುತ್ತಾರೆ ಹಾಗೂ ಶ್ರಿ ಜಗದೀಶ್ ಶೆಟ್ಟರ್ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾನ್ಯತೆ ಮಾಡಲು ಕೋರಿರುತ್ತಾರೆ. ಆದುದರಿಂದ, ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2(2)ರ ರೀತ್ಯಾ ಭಾರತೀಯ ಜನತಾ ಪಕ್ಷವನ್ನು ವಿಧಾನ ಸಭೆಯಲ್ಲಿ ಅಧಿಕೃತ ವಿರೋಧ ಪಕ್ಷವೆಂದು ಹಾಗೂ ಶ್ರೀ ಜಗದೀಶ್ ಶೆಟ್ಟರ್ ಅವರನ್ನು ವಿರೋಧ ಪಕ್ಷದ ನಾಯಕರೆಂದು ತಕ್ಷಣದಿಂದ ಜಾರಿಗೆ ಬರುವಂತೆ ಮನ್ನಣೆ ನೀಡಲಾಗಿದೆ

2. ಸಂತಾಪ ಸೂಚನೆ

ವಿಷಯ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಹಾಗೂ ಇನ್ನಿತರು ನಿಧನ ಹೊಂದಿರುವ ಬಗ್ಗೆ.

ಅಧ್ಯಕ್ಷರು:– ಈಗ ಸಂತಾಪ ಸೂಚನೆ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಸಭಾಧ್ಯಕ್ಷರೆ, ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಶಾಸಕರಿಂದ ಅಕ್ರಮ ನಡೆಯುತ್ತಿತ್ತೆಂದು ಇವತ್ತಿನ ದಿವಸ ಟಿ.ವಿ.ಯಲ್ಲಿ ದೊಡ್ಡ ಪ್ರಚಾರ ಆಗುತ್ತಿದೆ. ಇದು ಎಲ್ಲ ಶಾಸಕರಿಗೂ ಕೂಡ ಒಂದು ರೀತಿಯಲ್ಲಿ..

ಅಧ್ಯಕ್ಷರು:– ಮಾನ್ಯ ದತ್ತರವರೇ, ಮೊದಲು ಸಂತಾಪ ಸೂಚನೆಯನ್ನು ಮುಗಿಸೋಣ.

ಶ್ರೀ ವೈ.ಎಸ್.ವಿ. ದತ್ತ:– ಆಯಿತು.

ಮಾನ್ಯ ಸಭಾಧ್ಯಕ್ಷರು:

ವಿಧಾನಸಭೆಯ ಮಾಜಿ ಸದಸ್ಯರಾದ ಮುಲ್ಕಾ ಗೋವಿಂದ ರೆಡ್ಡಿ, ಎನ್.ಎ. ಚನ್ನೇಗೌಡ ಮತ್ತು ಲೋಕಸಭೆಯ ಮಾಜಿ ಸದಸ್ಯರು ಹಾಗೂ ಮೈಸೂರು ರಾಜಮನೆತನದ ವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪ ಹಾಗೂ ಖ್ಯಾತ ತೆಲಗು ನಟ ಡಾ॥ ಅಕ್ಕಿನೇನಿ ನಾಗೇಶ್ವರ ರಾವ್ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಮುಲ್ಕಾ ಗೋವಿಂದ ರೆಡ್ಡಿ

ಮುಲ್ಕಾ ಗೋವಿಂದ ರೆಡ್ಡಿ ಅವರು 1916ರಲ್ಲಿ ಚಿತ್ರದುರ್ಗ ಜಿಲ್ಲೆಯ ಹಾಯ್ಕಲ್‌ನಲ್ಲಿ ಜನಿಸಿರುತ್ತಾರೆ. ನೇರ ಮತ್ತು ನಿಷ್ಠುರ ನಡೆಗೆ ಹೆಸರುವಾಸಿಯಾಗಿದ್ದ ಮುಲ್ಕಾ ಗೋವಿಂದ ರೆಡ್ಡಿ ಅವರು ರೈತರ ಪರ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರಲ್ಲದೇ, ಕಾಗೋಡು ರೈತ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೊಳಗಾಗಿದ್ದರು. ದಿವಂಗತರು ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ 1945ರಲ್ಲಿ ಸಂಘದ ಅಭ್ಯರ್ಥಿಯಾಗಿ ಚಿತ್ರದುರ್ಗ ಕ್ಷೇತ್ರದಿಂದ ಚುನಾಯಿತರಾಗಿದ್ದರು.

1952 ರಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ ವತಿಯಿಂದ ಮೈಸೂರು ವಿಧಾನಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿದ್ದು ಆ ಅವಧಿಯಲ್ಲಿ ಪಿ.ಎಸ್.ಪಿ.ಯ ಉಪನಾಯಕರಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ. ದಿವಂಗತರು 1958 ರಿಂದ 1982ರ ವರೆಗೆ ರಾಜ್ಯಸಭೆ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು, ರಾಜ್ಯಸಭೆಯಲ್ಲಿ ಅವರು ಒಟ್ಟಾರೆ ಸುಮಾರು 100 ಅಧಿವೇಶನಗಳಲ್ಲಿ ಭಾಗವಹಿಸಿದ್ದ ಕೀರ್ತಿಗೆ ಭಾಜನರಾಗಿದ್ದ ಕಾರಣ 2003 ರಲ್ಲಿ ದಿವಂಗತರನ್ನು ಗೌರವಿಸಲಾಗಿತ್ತು.

ದಕ್ಷಿಣ ಭಾರತದಲ್ಲಿ ಈ ಗೌರವಕ್ಕೆ ಪಾತ್ರರಾದ ಏಕೈಕ ಸಂಸದರಾಗಿದ್ದರು.

2012 ರಲ್ಲಿ ವಿಧಾಸಭೆಗೆ 60ವರ್ಷ ತುಂಬಿದ ಪ್ರಯುಕ್ತ ಆಚರಿಸಲಾದ ವಜ್ರಮಹೋತ್ಸವ ಸಮಾರಂಭದಲ್ಲಿ ಮುಲ್ಕಾ ಗೋವಿಂದ ರೆಡ್ಡಿ ಅವರು ಪ್ರಥಮ ವಿಧಾನಸಭೆಯ ಸದಸ್ಯರಾಗಿರುವುದನ್ನು ಸ್ಮರಿಸಿ ಅವರನ್ನು ವಿಧಾನಸಭೆಯಲ್ಲಿ ಗೌರವಿಸಲಾಗಿತ್ತು. ಸಮಾಜವಾದಿ ಸಿದ್ಧಾಂತದಲ್ಲಿ ಒಲವು ಹೊಂದಿದ್ದ ಮುಲ್ಕಾ ಗೋವಿಂದ ರೆಡ್ಡಿ ಅವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿರುತ್ತದೆ.

ಮುಲ್ಕಾ ಗೋವಿಂದ ರೆಡ್ಡಿ ದಿನಾಂಕ 09.12.2013 ರಂದು ನಿಧನಹೊಂದಿರುತ್ತಾರೆ.

2. ಎನ್.ಎ. ಚನ್ನೇಗೌಡ

ಎನ್.ಎ. ಚನ್ನೇಗೌಡ ಅವರು ದಿನಾಂಕ: 18ನೇ ಡಿಸೆಂಬರ್ 1923 ರಲ್ಲಿ ಜನಿಸಿದ್ದು, ಸ್ನಾತಕೋತ್ತರ ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ದಿವಂಗತರು 34 ವರ್ಷಗಳ ಕಾಲ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ ಮತ್ತು ಎರಡು ವರ್ಷಗಳ ಕಾಲ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ದಿವಂಗತರು 1967 ರಲ್ಲಿ ಪಾಂಡವಪುರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ನಾಲ್ಕನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು ಸರಳತೆ, ಶಿಸ್ತು ಮತ್ತು ಪ್ರಾಮಾಣಿಕತೆಗೆ ಹೆಸರುವಾಸಿಯಾಗಿದ್ದರು.

ಎನ್.ಎ. ಚನ್ನೇಗೌಡ ಅವರು ದಿನಾಂಕ: 09.12.1013 ರಂದು ನಿಧನ ಹೊದಿರುತ್ತಾರೆ.

3. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ದಿನಾಂಕ: 20ನೇ ಫೆಬ್ರವರಿ 1953 ರಂದು ಮೈಸೂರಿನಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ತಂದೆಯ ನಿಧನಾ ನಂತರ ಮೈಸೂರು ರಾಜಮನೆತನದ ರಾಜವಂಶಸ್ಥರಾಗಿ 1974ರಲ್ಲಿ ಅಧಿಕಾರ ಸ್ವೀಕರಿಸಿದ್ದರು. ದಿವಂಗತರು 1984, 1989, 1996 ಮತ್ತು 1999ರಲ್ಲಿ ಕ್ರಮವಾಗಿ 8,9,11 ಮತ್ತು 13ನೇ ಲೋಕಸಭೆಗೆ ಮೈಸೂರು ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿ ಕಾರ್ಯನಿರ್ವಹಿಸಿರುತ್ತಾರೆ ಹಾಗೂ ಎರಡು ಬಾರಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಅರಮನೆಯಲ್ಲಿದ್ದರೂ ಸಾಮಾನ್ಯರಂತೆ ಬದುಕಿ ಎಲ್ಲರೊಳಗೆ ಒಂದಾಗಿದ್ದ ಅವರ ಸರಳತೆ, ಸಜ್ಜನಿಕೆಯಿಂದ ಜನರ ಮನಸ್ಸಿನಲ್ಲಿದ್ದರು. ಕನ್ನಡ ನಾಡಿನ ಸಂಸ್ಕೃತಿಗೆ ಮತ್ತು ಅಭಿವೃದ್ಧಿಗೆ ಮೈಸೂರು ಯದುವಂಶದ ರಾಜರು ನೀಡಿದ ಕೊಡುಗೆ ಅಪಾರ.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ರಾಜ ವಂಶಸ್ಥರಾಗಿ ಅಧಿಕಾರ ಸ್ವೀಕರಿಸಿದಾಗಿನಿಂದ ಈವರೆಗೂ ಮೈಸೂರು ದಸರಾ ಮಹೋತ್ಸವದ ಖಾಸಗಿ ದರ್ಬಾರನ್ನು ಹಾಗೂ ನಾಡ ಹಬ್ಬದ ವಿಧಿ ವಿಧಾನಗಳನ್ನು ನಡೆಸಿಕೊಡುತ್ತಿದ್ದರಲ್ಲದೆ, ಅಪಾರ ದೈವ ಭಕ್ತರೂ ಮತ್ತು ಸರಳ ಸಜ್ಜನಿಕೆಯ ಸಾಕಾರ ಮೂರ್ತಿಯಾಗಿದ್ದರು ಹಾಗೂ ವಿಭಿನ್ನ ಹವ್ಯಾಸಿಯಾಗಿದ್ದರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ನಿಧನದಿಂದಾಗಿ ರಾಜ್ಯಕ್ಕೆ ಅಪಾರ ನಷ್ಟವಾಗಿದ್ದು, ಮೈಸೂರು ಯದುವಂಶದ ಕೊನೆಯ ಕೊಂಡಿ ಕಳಚಿದಂತಾಗಿರುತ್ತದೆ.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ದಿನಾಂಕ 10.12.2013 ರಂದು ನಿಧನ ಹೊಂದಿರುತ್ತಾರೆ.

4. ಡಾ॥ ಜಿ.ಎಸ್. ಶಿವರುದ್ರಪ್ಪ

ಡಾ॥ ಜಿ.ಎಸ್. ಶಿವರುದ್ರಪ್ಪ ಅವರು ದಿನಾಂಕ 7ನೇ ಫೆಬ್ರವರಿ 1926ರಂದು ಶಿಕಾರಿಪುರದಲ್ಲಿ ಜನಿಸಿರುತ್ತಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಶಿಕಾರಿಪುರದಲ್ಲಿಯೇ ಪೂರೈಸಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು. 1949 ರಿಂದ 1963ರ ವರೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದ ದಿವಂಗತರು 1963ರಿಂದ 1966ರ ವರೆಗೆ ಹೈದ್ರಾಬಾದ್‌ನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ರೀಡರ್ ಆಗಿ 1966ರಿಂದ 1970ರ ವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರದ ರೀಡರ್ ಆಗಿ 1970ರಿಂದ 1986ರ ವರೆಗೆ ನಿರ್ದೇಶಕರಾಗಿ ಮತ್ತು ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿರುತ್ತಾರೆ. 1983 ರಿಂದ 1984ರ ವರೆಗೆ ಯು.ಜಿ.ಸಿ ಯಿಂದ ರಾಷ್ಟ್ರೀಯ ಉಪನ್ಯಾಸಕರಾಗಿ ನೇಮಕಗೊಂಡಿದ್ದರಲ್ಲದೇ 1987 ರಿಂದ 1990ರ ವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಸೇವೆಸಲ್ಲಿಸಿರುತ್ತಾರೆ.

ದಿವಂಗತರು 1965ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದಿದ್ದರು.

ಡಾ॥ ಶಿವರುದ್ರಪ್ಪನವರು ಹಲವು ಕವನ ಸಂಕಲಗಳನ್ನು ಮತ್ತು ಹಲವಾರು ಗದ್ಯಕೃತಿಗಳನ್ನು ರಚಿಸಿದ್ದರು. ದಿವಂಗತರು 1991ರಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಡಾ॥ ಶಿವರುದ್ರಪ್ಪನವರು ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯಾದಿಯಾಗಿ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರಲ್ಲದೇ 2006ರಲ್ಲಿ ರಾಷ್ಟ್ರಕವಿ ಪ್ರಶಸ್ತಿಗೆ ಪುರಸ್ಕೃತರಾಗಿದ್ದರು.

ಡಾ॥ ಶಿವರುದ್ರಪ್ಪನವರು ಸರಳ ಮಿತಭಾಷಿಯಾಗಿದ್ದರು ಮತ್ತು ಕನ್ನಡದ ಏಳ್ಗೆಗಾಗಿ ಶ್ರಮಿಸಿದವರಾಗಿದ್ದು ಇವರ ಅಗಲಿಕೆಯು ಕನ್ನಡ ಸಾರಸ್ವತ ಲೋಕಕ್ಕೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಹಾಗೂ ಕನ್ನಡನಾಡಿಗೆ ಅಪಾರ ನಷ್ಟವುಂಟಾಗಿರುತ್ತದೆ.

ಡಾ॥ ಶಿವರುದ್ರಪ್ಪನವರು ದಿನಾಂಕ 23.12.2013 ರಂದು ನಿಧನ ಹೊಂದಿರುತ್ತಾರೆ.

5. ಡಾ॥ ಅಕ್ಕಿನೇನಿ ನಾಗೇಶ್ವರ ರಾವ್

ಡಾ॥ ಅಕ್ಕಿನೇನಿ ನಾಗೇಶ್ವರ ರಾವ್ ಅವರು ದಿನಾಂಕ 20ನೇ ಸೆಪ್ಟೆಂಬರ್ 1924 ರಂದು ಆಂದ್ರ ಪ್ರದೇಶದ ಕೃಷ್ಣಾ ಜಿಲ್ಲೆಯ ರಾಮಪುರಂ ನ ಕೃಷಿಕ ಕುಟುಂದಲ್ಲಿ ಜನಿಸಿದ್ದರು. 17ನೇ ವಯಸ್ಸಿನಲ್ಲಿ ತೆಲುಗು ಚಿತ್ರರಂಗಕ್ಕೆ ಪ್ರವೇಶಿಸಿದ ದಿವಂಗತರು ಸುಮಾರು 255 ಚಲನಚಿತ್ರಗಳಲ್ಲಿ ನಟಿಸಿದ್ದರಲ್ಲದೆ ವಾಲ್ಮೀಕಿ ಮತ್ತು ದೇವದಾಸ್ ಚಲನಚಿತ್ರಗಳಲ್ಲಿನ ಅಮೋಘ ಪ್ರದರ್ಶನದಿಂದ ಅವರು ಚಿತ್ರರಂಗದ ನಟಸಾರ್ವಭೌಮರೆನಿಸಿಕೊಂಡಿದ್ದರು.

ಡಾ॥ ನಾಗೇಶ್ವರ ರಾವ್ ಅವರ ಚಿತ್ರರಂಗದ ಸಾಧನೆಗಾಗಿ ಹಲವಾರು ಪ್ರಶಸ್ತಿಗಳ ಜೊತೆಗೆ ಪದ್ಮವಿಭೂಷಣ ಮತ್ತು ದಾದಾ ಸಾಹೇಬ ಪಾಲ್ಕೆಯಂತಹ ಶ್ರೇಷ್ಠ ಪ್ರಶಸ್ತಿಗಳು ಲಭಿಸಿದ್ದವು

ಡಾ॥ ನಾಗೇಶ್ವರ ರಾವ್ ಅವರ ನಿಧನದಿಂದ ಚಲನಚಿತ್ರರಂಗಕ್ಕಲ್ಲದೆ ದೇಶದಲ್ಲಿನ ಅಪಾರ ಅಭಿಮಾನಿಗಳಿಗೆ ಭರಿಸಲಾಗದ ದು:ಖ ಉಂಟಾಗಿದೆ.

ಡಾ॥ ಅಕ್ಕಿನೇನಿ ನಾಗೇಶ್ವರ ರಾವ್ ಅವರು ದಿನಾಂಕ: 22.01.2014 ರಂದು ನಿಧನ ಹೊಂದಿರುತ್ತಾರೆ.

6. ಯಶವಂತ ಹಳಬಂಡಿ

ಯಶವಂತ ಹಳಬಂಡಿಯವರು ದಿನಾಂಕ: 25ನೇ ಮೇ 1950ರಂದು ಧಾರವಾಡದಲ್ಲಿ ಜನಿಸಿರುತ್ತಾರೆ. ಚಿಕ್ಕವಯಸ್ಸಿನಲ್ಲಿಯೇ ಸಂಗೀತಕ್ಕೆ ಮಾರುಹೋದ ಹಳಬಂಡಿಯವರು ಯಶವಂತ ಲಕ್ಷ್ಮಣ ರಾವ್ ದೇವಾಂಗ ಮಠ ಅವರಲ್ಲಿ ಸಂಗೀತ ಅಭ್ಯಾಸ ಪ್ರಾರಂಭಿಸಿ ನಂತರ ನಾರಾಯಣರಾವ್ ಮಜುಂ ದಾರ್ ಮತ್ತು ಕೇಶವ್ ಗುರುವ ಹಾಗೂ ಖ್ಯಾತ ವೈಲಿನ್ ವಾದಕ ಪಂಡಿತ ವಸಂತ ಕನಕಾಪುರ ಅವರಲ್ಲಿ ಸಂಗೀತಾಭ್ಯಾಸ ಮಾಡಿರುತ್ತಾರೆ.

1971ರಲ್ಲಿ ಪ್ರಥಮವಾಗಿ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಮೂಡಲಮನೆಯ ಹಾಡನ್ನು ಹಾಡುವುದರ ಮೂಲಕ ಸಂಗೀತಗಾಯನವನ್ನು ಪ್ರಾರಂಭಿಸಿದರು.

ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸುಗಮ ಸಂಗೀತ ಮತ್ತು ಭಾವಗೀತೆಗಳನ್ನು ತಮ್ಮದೇ ಆದ ವಿಶಿಷ್ಠ ಕಂಠದಿಂದ ಹಾಡುವುದರ ಮೂಲಕ ಸಂಗೀತ ಕ್ಷೇತ್ರದಲ್ಲಿ ಅಪಾರ ಜನಮನ್ನಣೆಯನ್ನು ಗಳಿಸಿದ್ದರು "ಪಾತರಗಿತ್ತಿ ಪಕ್ಕ ನೋಡಿದ್ಯೇನೆ ಅಕ್ಕ....". ಬೇಂದ್ರೆಯವರು ರಚಿಸಿದ ಈ ಗೀತೆಯನ್ನು ಹಾಡಿದ್ದು, ಆ ಹಾಡು ಎಲ್ಲರ ಮನೆ ಮಾತಾಗಿತ್ತು.

ಯಶವಂತ ಹಳಬಂಡಿ ಅವರು ದಿನಾಂಕ:22.01.2014ರಂದು ನಿಧನ ಹೊಂದಿರುತ್ತಾರೆ.

ಶ್ರೀ ಸಿದ್ದರಾಮಯ್ಯ(ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭೆಯ ನಂತರ ಈ ಮನೆಯ ಸದಸ್ಯರಾಗಿದ್ದ ಮುಲ್ಕಾ ಗೋವಿಂದ ರೆಡ್ಡಿಯವರು, ಎನ್.ಎ. ಚನ್ನೇಗೌಡರವರು ಹಾಗೂ ಮೈಸೂರು ರಾಜ ವಂಶಸ್ಥರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರು ಮತ್ತು ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರು, ಖ್ಯಾತ ತೆಲಗುಚಿತ್ರ ನಟ ಡಾ॥ ಅಕ್ಕಿನೇನಿ ನಾಗೇಶ್ವರ ರಾವ್‌ರವರು ಮತ್ತು ಯಶವಂತ ಹಳಬಂಡಿಯವರು ನಿಧನ ಹೊಂದಿರುತ್ತಾರೆ. ಇವರ ಆತ್ಮಕ್ಕೆ ಶಾಂತಿಯನ್ನು ಕೋರಿ ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ಶ್ರೀ ಮುಲ್ಕಾ

ಗೋವಿಂದ ರೆಡ್ಡಿಯವರು ಚಿತ್ರದುರ್ಗ ಜಿಲ್ಲೆಯವರು. ಬಹಳ ನೇರವಾದಂಥ ಮತ್ತು ನಿಷ್ಠುರವಾದಂಥ ಮಾತಿಗೆ ಹೆಸರಾದಂಥವರು. ಇವರು ರೈತ ಹೋರಾಟದಲ್ಲಿ ಭಾಗವಹಿಸಿದ್ದರು. ಕಾಗೋಡು ರೈತ ಹೋರಾಟದಲ್ಲಿಯೂ ಕೂಡ ಭಾಗವಹಿಸಿದ್ದರು. ಸಮಾಜವಾದ ಸಿದ್ಧಾಂತವನ್ನು ಒಪ್ಪಿಕೊಂಡಿರತಕ್ಕಂತವರು, ಇವರು ಬಿ.ಎಸ್.ಪಿ. ಪಾರ್ಟಿಯಲ್ಲಿದ್ದವರು. ಇವರು 1945 ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ರೈತ ಸಂಘದ ಅಭ್ಯರ್ಥಿಯಾಗಿ ಚಿತ್ರದುರ್ಗ ಕ್ಷೇತ್ರದಿಂದ ಆಯ್ಕೆಯಾಗಿದ್ದರು. 1952 ರಲ್ಲಿ ಮೊದಲನೆಯ ವಿಧಾನಸಭೆಗೆ ಮೈಸೂರು ರಾಜ್ಯ ವಿಧಾನಸಭೆಗೆ ಆಯ್ಕೆಯಾಗಿ ಬಿ.ಎಸ್.ಪಿ. ಪಕ್ಷದಿಂದ ಉಪನಾಯಕನಾಗಿ ಕೆಲಸವನ್ನು ಮಾಡಿದ್ದರು. ಆಮೇಲೆ 1958ರಿಂದ 1982ರವರೆಗೆ ಸುಮಾರು 24 ವರ್ಷಗಳವರೆಗೆ ರಾಜ್ಯಸಭೆಗೆ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಇವರು ಒಳ್ಳೆಯ ಸಂಸದೀಯ ಪಟುವಾಗಿದ್ದರು ಮತ್ತು ಸಂಸತ್ತಿನ ಕಾರ್ಯಕಲಾಪಗಳಲ್ಲಿ ತಪ್ಪಿಸದೇ ಭಾಗವಹಿಸುತ್ತಿದ್ದರು. ಸುಮಾರು 100 ಅಧಿವೇಶನಗಳಲ್ಲಿ ಭಾಗವಹಿಸಿದ್ದರು ಎನ್ನುವ ಕಾರಣಕ್ಕಾಗಿ ಇವರನ್ನು 2003 ರಲ್ಲಿ ಗೌರವಿಸಿದ್ದಾರೆ. ದಕ್ಷಿಣ ಭಾರತದಲ್ಲಿ ಈ ಗೌರವಕ್ಕೆ ಪಾತ್ರರಾದ ಏಕೈಕ ವ್ಯಕ್ತಿಯಾಗಿರುತ್ತಾರೆ. ಆ ಹಿರಿಮೆಗೆ ಪಾತ್ರರಾಗಿರುವ ಅವರನ್ನು ನಾವು ಇವತ್ತು ನೆನಪಿಸಿಕೊಳ್ಳಬೇಕಾಗುತ್ತದೆ. ವಿಧಾನಸಭೆಗೆ 60 ವರ್ಷ ತುಂಬಿದ ಸಂದರ್ಭದಲ್ಲಿ ಮತ್ತು ಮೊದಲ ಬಾರಿಗೆ ಆಯ್ಕೆಯಾಗಿದ್ದವರೆಂದು ಅವರಿಗೆ ಗೌರವವನ್ನು ಸಲ್ಲಿಸಿದ್ದಾರೆ. ನನಗೆ ವ್ಯಯಕ್ತಿಕ ಸಂಪರ್ಕ ಇಲ್ಲದೆ ಇದ್ದರು ಕೂಡ ಅನೇಕ ಸಾರಿ ನಾನು ಅವರನ್ನು ಭೇಟಿ ಮಾಡಿ ಅವರ ಜೊತೆಯಲ್ಲಿ ಚರ್ಚೆ ಮಾಡಿರುತ್ತೇನೆ. ರೈತರ ಬಗ್ಗೆ, ಬಡವರ ಬಗ್ಗೆ, ಸಮಾಜ ಬದಲಾವಣೆ ಬಗ್ಗೆ ಅಪಾರವಾದ ಕಳಕಳಿಯನ್ನು ಇಟ್ಟುಕೊಂಡಿದ್ದರು. ಬಹಳ ದೀರ್ಘಕಾಲ ಕೆಲಸ ಮಾಡಿ ಸಮಾಜಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರುವುದಕ್ಕೆ ಇವತ್ತು ಅವರನ್ನು ನೆನೆಪಿಸಿಕೊಳ್ಳಬೇಕಾಗಿದೆ. ಅವರ ನಿಧನದಿಂದ ರಾಜ್ಯಕ್ಕೆ ದೊಡ್ಡ ನಷ್ಟವಾಗಿದೆ ಎನ್ನುವ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಪ್ರಾರ್ಥನೆಯನ್ನು ಮಾಡುತ್ತೇನೆ.

ಶ್ರೀ ಎನ್.ಎ. ಚನ್ನಗೌಡರು ಪಾಂಡವಪುರ ತಾಲ್ಲೂಕಿನ ಮಂಡ್ಯ ಜಿಲ್ಲೆಯವರಾಗಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ 34 ವರ್ಷಗಳ ದೀರ್ಘಕಾಲ ಕೆಲಸ ಮಾಡಿದ್ದಾರೆ ಮತ್ತು ಎರಡು ವರ್ಷಕಾಲ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. 1967 ರಲ್ಲಿ ಪಾಂಡವಪುರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಇವರು ಬಹಳ ಸರಳ ಮತ್ತು ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಇವರು ಶಿಸ್ತಿಗೆ ಬಹಳ ಮಹತ್ವವನ್ನು ಕೊಡುತ್ತಿದ್ದರು. ಶಿಸ್ತು ಪ್ರಾಮಾಣಿಕತೆಗೆ ಹೆಸರುವಾಸಿಯಾದ ಶ್ರೀ ಎನ್.ಎ. ಚನ್ನೇಗೌಡರವರು ಇವತ್ತು ನಮ್ಮನ್ನು ಅಗಲಿರುತ್ತಾರೆ. ಅವರ ಆತ್ಮಕ್ಕೆ ಕೂಡ ನಾನು ಈ ಸಂದರ್ಭದಲ್ಲಿ ಶಾಂತಿಯನ್ನು ಕೋರುತ್ತೇನೆ.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರು ಮೈಸೂರು ಯದುವಂಶದ ರಾಜಮನೆತನದವರು. ಯದುವಂಶದ ಕೊನೆ ಕುಡಿ. ಅವರ ತಂದೆ ಜಯಚಾಮರಾಜೇಂದ್ರ ಒಡೆಯರ್‌ರವರು 1974 ನೇ ಇಸವಿಯಲ್ಲಿ ಕಾಲವಾದ ಮೇಲೆ ಇವರು ಮೈಸೂರು ಮನೆತನದ ರಾಜವಂಶಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದರು. ಅವರು ಇರುವವರೆಗು ಕೂಡ ಖಾಸಗಿ ದಸರಾ ದರ್ಬಾರ್ ಅನ್ನು ನಡೆಸಿಕೊಂಡು ಬರುತ್ತಿದ್ದರು. ಬಹಳ ಸರಳ ಸಜ್ಜನಿಕೆ ವ್ಯಕ್ತಿ ಯಾವುದೇ ಆಡಂಬರ ಇರುತ್ತಿರಲಿಲ್ಲ. ರಾಜ ಮನೆತನದಿಂದ ಬಂದಿದ್ದೇನೆ ಎಂದು ಅವರಿಗೆ ಯಾವುದೇ ಧಿಮಾಕು ಇರುತ್ತಿರಲಿಲ್ಲ. ಎಲ್ಲರ ಜೊತೆಗೂ ಬೆರೆಯುತ್ತಿದ್ದರು. ಸಾಮಾನ್ಯ ಜನರ ಜೊತೆಗೂ ಬೆರೆಯುತ್ತಿದ್ದರು. ಇಡೀ ರಾಜ್ಯದಲ್ಲಿ, ಮೈಸೂರು ಭಾಗದಲ್ಲಿ ಅವರಿಗೆ ಬಹಳ ಗೌರವವಿತ್ತು ಎನ್ನುವುದನ್ನು ಅವರ ಸಾವಿನ ಸಂದರ್ಭದಲ್ಲಿ ಜನ ಅವರನ್ನು ಗೌರವಿಸಿದ್ದನ್ನು ನೋಡಿದರೆ, ಗೊತ್ತಾಗುತ್ತದೆ. ಅಸಂಖ್ಯಾತ ಜನರು ಅವರ ಕೊನೆ ಯಾತ್ರೆಯಲ್ಲಿ ಭಾಗವಹಿಸಿದ್ದರು. ಹಾಗಾಗಿ ಅವರ ಬಗ್ಗೆ ಜನರು ಬಹಳ ಅಭಿಮಾನ, ಗೌರವ ಇಟ್ಟುಕೊಂಡಿದ್ದರು ಎಂದು ನಾವು ನೋಡಲಿಕ್ಕೆ ಸಾಧ್ಯವಾಗುತ್ತದೆ. ಅವರು ರಾಜಕೀಯ ಕ್ಷೇತ್ರದಲ್ಲಿಯೂ ಆಸಕ್ತಿ ಹೊಂದಿದ್ದರು. ನಾಲ್ಕು ಬಾರಿ ಲೋಕಸಭಾ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದರು. ಕರ್ನಾಟಕ ಕ್ರಿಕೆಟ್ ಸಂಸ್ಥೆಯಲ್ಲಿ ಎರಡು

ಬಾರಿ ಅಧ್ಯಕ್ಷರಾಗಿದ್ದರು. ಈಗ ಎರಡನೆ ಬಾರಿಗೆ ಅಧ್ಯಕ್ಷರಾಗಿ ಕೇಲವೆ ದಿನಗಳು ಆಗಿತ್ತು. ಅಷ್ಟರಲ್ಲಿ ಕಾಲವಾದರು. ಮೊದಲು ಒಮ್ಮೆ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಎರಡನೆ ಬಾರಿಗೆ ಆಯ್ಕೆಯಾದ ಮೇಲೆ ಅವರಿಗೆ ಬಹಳ ದಿನ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಲು ಅವಕಾಶ ಸಿಗಲಿಲ್ಲ. ಅವರಿಗೆ ಕ್ರಿಕೆಟ್ ಬಗ್ಗೆ ಅಪಾರವಾದಂತಹ ಅಭಿಮಾನವಿತ್ತು. ಅವರು ಮಹಾರಾಜ ಕಾಲೇಜಿನಲ್ಲಿ ಓದುತ್ತಿರುವಾಗ ಸ್ವತ: cricket player ಆಗಿದ್ದರು. ಕ್ರಿಕೆಟ್ ಟೀಮ್‌ನ ನಾಯಕರೂ ಆಗಿದ್ದರು. ಗಂಗೋತ್ರಿ ವಿಶ್ವವಿದ್ಯಾನಿಲಯದಲ್ಲಿ ಅವರು ಎಂ.ಎ. ಪದವಿಯನ್ನು ಓದಿ, ಮಹಾರಾಜಾ ಕಾಲೇಜಿನಲ್ಲಿ ಸ್ವಲ್ಪ ದಿವಸಗಳ ಕಾಲ ಉಪನ್ಯಾಸಕರಾಗಿಯೂ ಕೆಲಸ ನಿರ್ವಹಿಸಿದ್ದರು. ಇವರು ಸಾಮಾನ್ಯ ಜನರಂತೆ ಬದುಕುತ್ತಿದ್ದರು. ಮೈಸೂರು ರಾಜ ವಂಶಸ್ಥರಿಂದ ಮೈಸೂರು ರಾಜ್ಯಕ್ಕೆ ವಿಶೇಷವಾಗಿ ಅಪಾರವಾದಂತಹ ಕೊಡುಗೆಯಾಗಿದೆ. ನಾಲ್ವಡಿ ಕೃಷ್ಣ ರಾಜ ಒಡೆಯರ್ ರವರನ್ನು ನಾವೆಲ್ಲರೂ ಕೂಡ ನನಪಿಸಿಕೊಳ್ಳಬೆಕು. ಸಾಮಾಜಿಕ ನ್ಯಾಯ ಅವರ ಕಾಲದಲ್ಲಿ ಆದಷ್ಟು ಬೇರೆ ಯಾವ ಕಾಲದಲ್ಲಿಯೂ ಆಗಲಿಲ್ಲ. ಮಿಲ್ಲರ್ ಆಯೋಗ ಮಾಡಿ ಅವರ ವರದಿಯನ್ನು ತರಿಸಿಕೊಂಡು ಅದನ್ನು ಜಾರಿ ಮಾಡಿ ಎಷ್ಟೇ ವಿರೋಧ ಬಂದರೂ ಕೂಡ ಗಟ್ಟಿಯಾಗಿ ನಿಂತು ತಿರ್ಮಾನ ಮಾಡಿ ಅದನ್ನು ಜಾರಿಗೆ ತಂದಂತಹ ಅವರ ಧೀಮಂತಿಕೆಯನ್ನು ನಾವು ಯಾವಾಗಲೂ ಕೂಡ ನೆನಪಿಸಿಕೊಳ್ಳಬೇಕಾಗುತ್ತದೆ. ಇವತ್ತು ಏನಾದರು ಮೈಸೂರು ಸಂಸ್ಥಾನ ಅಭಿವೃದ್ಧಿಯಾಗಿದ್ದರೆ ಅದಕ್ಕೆ ಯದುವಂಶದ ರಾಜರುಗಳು ಕಾರಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲು ಬಯಸುತ್ತಿದ್ದೇನೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಕಾಂಗ್ರೆಸ್ ಪಕ್ಷದಲ್ಲಿ ಬಹಳ ವರ್ಷಗಳಿಂದ ಇದ್ದರು. ಕೊನೆಯವರೆಗೂ ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರು. ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದರು. ಮಧ್ಯೆಯಲ್ಲಿ ಸ್ವಲ್ಪ ದಿನ ಬಿಜೆಪಿಗೆ ಹೋಗಿದ್ದರು. ಅದನ್ನು ಬಿಟ್ಟರೆ ದೀರ್ಘಕಾಲ ಅವರು ಕಾಂಗ್ರೆಸ್‌ನಲ್ಲಿದ್ದರು. ಅವರು ಕಾಂಗ್ರೆಸ್ ಬಗ್ಗೆ ಅಪಾರವಾದ ಪ್ರೀತಿ, ಅಭಿಮಾನ, ಗೌರವ ಇಟ್ಟುಕೊಂಡಿದ್ದರು. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಅವರ ಕುಟುಂಬವರ್ಗದವರಿಗೂ

ಕೂಡ ಅವರ ಸಾವಿನ ದುಃಖವನ್ನು ಭರಿಸಲು ಶಕ್ತಿ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಇವತ್ತು ರಾಜ್ಯ ಸರ್ಕಾರ, ಅವರಿಗೆ ರಾಜ್ಯ ಗೌರವವನ್ನು ಕೊಟ್ಟು ರಜಾ ಘೋಷಣೆ ಮಾಡಿ ರಾಜ್ಯ ಸರ್ಕಾರ ಅವರ ದು:ಖದಲ್ಲಿ ಪಾಲುದಾರರಾಗಿತ್ತು ಎನ್ನುವ ಮಾತನ್ನು ಹೇಳಲು ಬಯಸುತ್ತೇನೆ.

ಡಾ|| ಜಿ.ಎಸ್. ಶಿವರುದ್ರಪ್ಪನವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದವರು. ಅಲ್ಲಿಯೇ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪೂರೈಸಿ ಮಹಾರಾಜ ಕಾಲೇಜಿನಲ್ಲಿ ಬಿ.ಎ.ಆನರ್ಸ್ ಪದವಿಯನ್ನು ಮಾಡುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಅಲ್ಲಿಯೇ 1949 ರಿಂದ 1963 ರವರೆಗೆ ಪ್ರಾಧ್ಯಾಪಕರಾಗಿ ವೃತ್ತಿ ಜೀವನವನ್ನು ಪ್ರಾರಂಭ ಮಾಡುತ್ತಾರೆ. ಆ ಕಾಲದಲ್ಲಿ ಅವರಿಗೆ ಬಹಳ ಒಳ್ಳೆಯ ಮೇಷ್ಟ್ರು ಎನ್ನುವ ಗೌರವವಿತ್ತು. ಉತ್ತಮ ಪ್ರಾಧ್ಯಾಪಕರಾಗಿದ್ದರು ಎನ್ನುವ ಕಾರಣಕ್ಕೋಸ್ಕರ ಎಲ್ಲಾ ವಿದ್ಯಾರ್ಥಿಗಳೂ ಕೂಡ ಅವರ ಬಗ್ಗೆ ಬಹಳ ಅಭಿಮಾನ, ಗೌರವವನ್ನು ಇಟ್ಟುಕೊಂಡಿದ್ದರು. ಜಿ.ಎಸ್.ಎಸ್.ರವರ ಬಗ್ಗೆ ಅವರಂತಹ ಉಪಾಧ್ಯಾಯರನ್ನು ಕಾಣಲಿಕ್ಕೆ ಸಾಧ್ಯವಿಲ್ಲ ಎನ್ನುವ ರೀತಿಯಲ್ಲಿ ಯಾರ್ಯಾರು ಅವರ ವಿದ್ಯಾರ್ಥಿಗಳಾಗಿದ್ದರು ಅವರು ಈಗಲೂ ಕೂಡ ನೆನಪಿಸಿಕೊಳ್ಳುತ್ತಾರೆ. 1963 ರಿಂದ 1966 ರವರೆಗೆ ಹೈದ್ರಾಬಾದ್‌ನ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆಗಿ ಸೇವೆ ಸಲ್ಲಿಸಿದ್ದರು. ಮತ್ತೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ಪ್ರಾಧ್ಯಾಪಕರಾಗಿ ಬಹಳ ವರ್ಷ ಕೆಲಸ ಮಾಡಿದ್ದಾರೆ. ಸುಮಾರು 1970 ರಿಂದ 1986 ರವರೆಗೂ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರ ಕಟ್ಟಿ ಬೆಳಸಿರುವ ಗೌರವ ಜಿ.ಎಸ್.ಎಸ್. ರವರಿಗೆ ಸಲ್ಲಬೇಕೆಂದು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲು ಬಯಸುತ್ತೇನೆ. 1987ರಿಂದ 1990 ರವರೆಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಇವರು ಕುವೆಂಪುರವರ ವೈಚಾರಿಕ ಚಿಂತನೆಯಿಂದ ಪ್ರಭಾವಿತರಾಗಿದ್ದರು. ಕುವೆಂಪುರವರ ವೈಚಾರಿಕ ಚಿಂತನೆಯನ್ನು ಇವರೂ ಕೂಡ ಬೆಳಸಿಕೊಂಡಿದ್ದರು. ಜಾತ್ಯಾತೀತ

ಮನೋಭಾವನೆಯನ್ನು ಬೆಳೆಸಿಕೊಂಡಿದ್ದವರು. ಜಾತ್ಯಾತೀತ ಮನೋಭಾವನೆಯನ್ನು ಬೆಳೆಸಿಕೊಂಡಿದ್ದವರು, ಜಾತ್ಯಾತೀತ ರಾಷ್ಟ್ರದ, ಸಮಾಜದ ಕಲ್ಪನೆಯನ್ನು ಇಟ್ಟುಕೊಂಡಿದ್ದವರು. ಆ ದಿಕ್ಕಿನಲ್ಲಿ ಅವರ ಅನೇಕ ಕವನಗಳನ್ನು ನೋಡಿದಾಗ ಕೇವಲ ಪ್ರಕೃತಿಗೆ ಸೀಮಿತವಾಗಿರದೇ, ಬದುಕಿಗೆ ಸಂಬಂಧಪಟ್ಟಂತಹ, ವೈಚಾರಿಕತೆಗೆ ಸಂಬಂಧಪಟ್ಟಂತಹ ವಿಚಾರಗಳನ್ನು ನಾವು ನೋಡಲು ಸಾಧ್ಯವಾಗುತ್ತದೆ. ಅಂತಹ ಕವನಗಳನ್ನು ಅವರು ರಚಿಸಿದ್ದರು. ಅವರಿಗೆ ಅನೇಕ ಪ್ರಶಸ್ತಿಗಳು ಲಭಿಸಿತ್ತು. ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಇವೆಲ್ಲಾ ಪ್ರಶಸ್ತಿಗಳು ಸಿಕ್ಕಿದ್ದವು. ಅವರು ಬಹಳ ಶಾಂತಿ ಪ್ರಿಯರು. ಶಿಸ್ತಿಗೆ ಹೆಸರಾದಂಥವರು. ಸುಮಾರು 15 ಕವನ ಸಂಕಲಗಳನ್ನು ರಚನೆ ಮಾಡಿದ್ದರು. 12ಕ್ಕೂ ಹೆಚ್ಚು ಸಂಶೋಧನಾ ಕೃತಿಗಳನ್ನು ರಚಿಸಿದ್ದರು. 4 ಪ್ರವಾಸ ಕಥನಗಳನ್ನು ರಚಿಸಿದ್ದರು. ಬೇರೆ ಬೇರೆ ದೇಶಕ್ಕೆ ಹೋಗಿದ್ದಾಗ ಅದರ ಬಗ್ಗೆ ಪ್ರವಾಸ ಕಥನವನ್ನು ರಚನೆ ಮಾಡಿದ್ದರು. ಶಿವರುದ್ರಪ್ಪನವರು ಯಾವಾಗಲೂ ಕುವೆಂಪುರವರನ್ನು ಅವರ ಹಿಂಬಾಲಕರ ರೀತಿ ಅನುಕರಣೆ ಮಾಡುವುದನ್ನು ಅವರ ಬದುಕಿನುದ್ದಕ್ಕೂ ಮಾಡಿಕೊಂಡು ಬಂದಿದ್ದರು. ಅವರು ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ. ಅವರು ಸಾರಸತ್ವ ಲೋಕಕ್ಕೆ ನೀಡಿದಂತಹ ಕೊಡುಗೆ ಅಪಾರವಾದುದು ಎಂದು ಈ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಅವರು ಇವತ್ತು ನಮ್ಮನ್ನು ಅಗಲಿದ್ದರೂ ಕೂಡ ಸದಾ ಸಾಂಸ್ಕ್ರತಿಕವಾಗಿ ನಮ್ಮ ಜೊತೆಯಲ್ಲಿದ್ದಾರೆ ಎನ್ನುವುದನ್ನು ನಾವು ಇವತ್ತು ತಿಳಿದುಕೊಳ್ಳಬೇಕಾಗುತ್ತದೆ. ಎಲ್ಲರ ಮನಸ್ಸಿನಲ್ಲಿ ಜಿ.ಎಸ್. ಶಿವರುದ್ರಪ್ಪನವರು ವಿಶೇಷವಾಗಿ ಕನ್ನಡಿಗರ ಮನಸ್ಸಿನಲ್ಲಿ ಹಾಸುಹೊಕ್ಕಾಗಿದ್ದರು. ಮಾನ್ಯ ದತ್ತಾತ್ರರವರು ಹೇಳಿದ ಹಾಗೆ, ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಲೋಕಕ್ಕೆ ಅವರದ್ದು ಅಪಾರವಾದಂತಹ ಕೊಡುಗೆ. ಅದನ್ನು ಇವತ್ತು ನಾವೆಲ್ಲರೂ ಸ್ಮರಿಸಿಕೊಳ್ಳಬೇಕಾಗುತ್ತದೆ. ಜಿ.ಎಸ್.ಎಸ್.ನವರು ಮೂರನೇ ರಾಷ್ಟ್ರಕವಿ ಆಗಿದ್ದಂಥವರು. ಶ್ರೀ ಮಂಜೇಶರಾಯರನ್ನು ಮತ್ತು ಕುವೆಂಪುರವರನ್ನು ಬಿಟ್ಟರೆ ಇವರೇ ಮೂರನೇ ರಾಷ್ಟ್ರಕವಿ ಯಾಗಿದ್ದರು. ರಾಷ್ಟ್ರಕವಿ ಎತ್ತರಕ್ಕೆ ಬೆಳೆಯತಕ್ಕಂತಹ ಇವರು

ಸಾಹಿತ್ಯಲೋಕದಲ್ಲಿ ಮಾಡಿರುವಂತಹ ಸಾಧನೆಯಿಂದ ರಾಷ್ಟ್ರಕವಿಯಾಗುವ ಮಟ್ಟಕ್ಕೆ ಬೆಳದಿದ್ದರು. ಶ್ರೀಯುತರು ಇಂದು ನಮ್ಮನ್ನು ಅಗಲಿದ್ದಾರೆ, ಅವರ ಆತ್ಮಕ್ಕೆ ಚಿರಶಾಂತಿಯನ್ನು ನಾನು ಈ ಸಂದರ್ಭದಲ್ಲಿ ಕೋರಿ ಅವರ ಕುಟುಂಬವರ್ಗದವರಿಗೆ ಅವರ ಸಾವಿನ ದುಃಖ ಭರಿಸುವಂತಹ ಶಕ್ತಿಯನ್ನು ಕೊಡಲೆಂದು ಹೇಳಿ ಪ್ರಾರ್ಥನೆ ಮಾಡುತ್ತೇನೆ.

ಡಾ॥ ಅಕ್ಕಿನೇನಿ ನಾಗೇಶ್ವರ ರಾವ್ ಇವರು ತೆಲುಗು ಚಿತ್ರರಂಗದಲ್ಲಿ ಏಳು ದಶಕಗಳ ಕಾಲ ಸುಮಾರು 255 ಚಿತ್ರಗಳಲ್ಲಿ ನಾಯಕರಾಗಿ ಕೆಲಸ ಮಾಡಿದವರಾಗಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಬಹುಶ: ಈ ಚಿತ್ರರಂಗದ ಕ್ಷೇತ್ರದಲ್ಲಿ 64 ನಾಯಕಿಯರ ಜೊತೆಯಲ್ಲಿ ಪಾತ್ರ ನಿರ್ವಹಿಸಿದ್ದಾರೆ. ಬೇರೆ ಯಾವ ನಾಯಕರುಗಳು ಸಹ ಇಷ್ಟೊಂದು ನಾಯಕಿಯರ ಜೊತೆಯಲ್ಲಿ ಪಾತ್ರ ಮಾಡಿರುವಂತಹ ನಿದರ್ಶನಗಳು ಇಲ್ಲ. ಇವರ ದೇವದಾಸ್ ಸಿನಿಮಾವನ್ನು ನಾವು ನೋಡಿದ್ದು ಅದನ್ನು ಬಹುಶ: ಯಾರು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ನೀವು ಸಹ ದೇವದಾಸ್ ಸಿನಿಮಾವನ್ನು ನೋಡಿರಬಹುದು ಎಂದು ಕಾಣುತ್ತದೆ. ದೇವದಾಸ್ ಸಿನಿಮಾವನ್ನು ಎರಡು–ಮೂರು ಸಾರಿ ನೋಡಿದ್ದೇನೆ. ದೇವದಾಸ್ ಚಿತ್ರದಲ್ಲಿ ಅವರ ಅಬಿನಯ ಇದೆಯಲ್ಲಾ ಅದರಲ್ಲಿ ಅವರು ಬಹಳ ಮನೋಜ್ಞವಾದಂತಹ ಅಭಿನಯವನ್ನು ಮಾಡಿದ್ದಾರೆ. ದೇವದಾಸ್ ಸಿನಿಮಾವು ಬೇರೆ ಬೇರೆ ಭಾಷೆಗಳಲ್ಲಿ ಬಂದು ಹೋಗಿದೆ ಬೇರೆ ಬೇರೆ ನಾಯಕರುಗಳು ಆ ಪಾತ್ರವನ್ನು ಮಾಡಿದ್ದರು ಆದರೆ ಡಾ: ಅಕ್ಕಿನೇನಿ ನಾಗೇಶ್ವರ ರಾವ್ ಇವರ ತರಹ ಯಾರೂ ಕೂಡ ಆ ಅಭಿನಯವನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅವರು ಅಷ್ಟರ ಮಟ್ಟಿಗೆ ಆ ಪಾತ್ರವನ್ನು ಮಾಡಿದ್ದರು. ಬಹುಶ: ಈ ಬಗ್ಗೆ ಚಿತ್ರರಸಿಕರಲ್ಲಿ ಇಡೀ ಭಾರತ ದೇಶದಲ್ಲಿ ಅವರು ಎಲ್ಲರ ಮನಸ್ಸಿನಲ್ಲಿ ಉಳಿಯುವಂತಹ ಪಾತ್ರವನ್ನು ಮಾಡಿದ್ದರು ಎಂದು ನಾನು ನೆನೆಸಿಕೊಳ್ಳುವುದಕ್ಕೆ ಬಯಸುತ್ತೇನೆ. ಹಾಗೇಯೇ ಅವರು ಇತ್ತೀಚೆಗೆ ಒಂದು ಪಾತ್ರವನ್ನು ಮಾಡಿದ್ದರು. ಅವರ ಮಗ, ಮೊಮ್ಮಗ, ಇವರು ಮೂರು ಜನರು ಸೇರಿ ಮನಮ್ ಎಂಬ ಚಿತ್ರದಲ್ಲಿ ಪಾತ್ರವನ್ನು ಮಾಡಿದ್ದರು. ಆ ಚಿತ್ರವು ಬಿಡುಗಡೆಯಾಗಿದೆಯೋ ಏನೋ ಗೊತ್ತಿಲ್ಲ. ಆ ಚಿತ್ರವು

ಬಿಡುಗಡೆಯಾಗುವುದಕ್ಕಿಂತ ಮುಂಚೆಯೇ ತೀರಿಹೋದರು ಎಂದು ಕಾಣುತ್ತದೆ. ಇನ್ನೊಂದು ವಿಪರ್ಯಾಸ ಎಂದರೆ, ಇವರು **"ಪ್ರೇಮಾಭಿಷೇಕಂ"** ಚಿತ್ರದಲ್ಲಿ ಕ್ಯಾನ್ಸರ್ ರೋಗಿಯ ಪಾತ್ರವನ್ನು ಮಾಡಿದ್ದರು. ಆದರೆ ಇವರು ಕೂಡ ಕ್ಯಾನ್ಸರ್ ರೋಗದಿಂದ ಸತ್ತಿರುವುದು ದೊಡ್ಡ ಅಚ್ಚರಿ ಮತ್ತು ವಿಪರ್ಯಾಸ ಎಂದು ಹೇಳಿ ನನಗನಿಸುತ್ತದೆ. ಪ್ರತಿಯೊಬ್ಬರು ಕೂಡ ಸಾಯಲೇಬೇಕಾಗುತ್ತದೆ. **"ಹುಟ್ಟು ಆಕಸ್ಮಿಕ ಸಾವು ಖಚಿತ"** ಅವರು ಒಂದು ಸಾರಿ ಹೇಳಿದ್ದರು. ನಾವು ಸಾವನ್ನು ಎದುರಿಸುವುದಕ್ಕೆ ತಯಾರಾಗಬೇಕೇಂದು ಒಂದು ಸಾರಿ ಅವರು ಭಾಷಣವನ್ನು ಮಾಡಿದ್ದರು. ಸಾವು ಯಾವಾಗಲಾದರೂ ಬಂದುಬಿಡುತ್ತದೆ ಸಾವನ್ನು ಎದುರಿಸುವುದಕ್ಕೆ ನಾವು ತಯಾರಾಗಿರಬೇಕು ಎಂದು ಹೇಳಿದ್ದರು. ಸಾವು ಬರುತ್ತದೆ ಎಂದು ಎಲ್ಲರಿಗೂ ಗೊತ್ತಿರುತ್ತದೆ, ನಮಗೂ ಗೊತ್ತಿದೆ ಅವರಿಗೂ ಗೊತ್ತಿದೆ, ಅವರು ಆಗಲೇ ಸಾವು ಬರುತ್ತದೆ ಎಂದು ಅದಕ್ಕೆ ತಯಾರಾಗಿರಬೇಕೇಂದು ಅವರು ಮಾನಸಿಕವಾಗಿ ಸಿದ್ಧರಾಗಿದ್ದರು ಮೊದಲೇ ಮುಂಚಿತವಾಗಿಯೇ ಅವರು ವ್ಯಕ್ತಮಾಡಿದ್ದರು ಎನ್ನುವ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೇ ಬಯಸುತ್ತೇನೆ.

ಶ್ರೀ ಯಶವಂತ ಹಳಬಂಡಿ ಇವರು ಸುಗಮಸಂಗೀತಗಾರರಾಗಿದ್ದಾರೆ. ಇವರು ಬಹಳ ಚಿಕ್ಕವಯಸ್ಸಿನಲ್ಲಿಯೇ ಸಂಗೀತಕ್ಕೆ ಮಾರುಹೋಗಿ ನಾಲ್ಕು ದಶಕಗಳ ಹೆಚ್ಚು ಕಾಲ ಸುಗಮಸಂಗೀತ ಮತ್ತು ಭಾವಗೀತೆಗಳ ತಮ್ಮದೇ ಆದ ವಿಶಿಷ್ಟವಾಗಿ ಹಾಡುವುದರ ಮೂಲಕ ಸಂಗೀತ ಕ್ಷೇತ್ರದಲ್ಲಿ ಅಪಾರವಾದಂತಹ ಜನಮನ್ನಣೆಯನ್ನು ಗಳಿಸಿದ್ದರು. ಬೇಂದ್ರೆಯವರು ರಚಿಸಿದಂತಹ ಮೂಡಲ ಮನೆಯ ಕವಿತೆಯನ್ನು ಆಕಾಶವಾಣಿಯಲ್ಲಿ ಮೊದಲನೆಯ ಬಾರಿಗೆ ಹಾಡುವುದರ ಮೂಲಕ ಪ್ರಾರಂಭ ಮಡಿದರು. **ಮೂಡಲ ಮನೆಯ ಮುತ್ತಿನ ನೀರಿನ ಎರಕಾವಾಹೊಯ್ದ, ಎರಕಾವಾಹೊಯ್ದ, ಎರಕಾವಾಹೊಯ್ದ,** ಎಂಬ ಬೇಂದ್ರೆಯವರ ಗೀತೆಯನ್ನು ಹಾಡಿದ್ದರು. ಇನ್ನೊಂದು ಗೀತೆ ಪ್ರಸಿದ್ಧವಾದದ್ದು **"ಪಾತರಗಿತ್ತಿ ಪಕ್ಕಾ ನೋಡಿದೇನೆ ಅಕ್ಕ...."** ಎಂಬ ಬೇಂದ್ರೆಯವರು ರಚಿಸಿದ ಹಾಡು. ಈ ಹಾಡು ಬಹಳ ಜನಪ್ರಿಯವಾದಂತಹ ಹಾಡು ಆಗಿದೆ. ಶ್ರೀ ಯಶವಂತ ಹಳಬಂಡಿಯವರು ಸಹ ನಿನ್ನೆ ತಾನೇ ನಿಧನರಾಗಿದ್ದರೆ.

ಇವರ ಆತ್ಮಕ್ಕೂ ಕೂಡ ಶಾಂತಿಯನ್ನು ಕೋರುತ್ತೇನೆ. ಈ ಎಲ್ಲಾ ಮಹನೀಯರ ಆತ್ಮಕ್ಕೆ ಮತ್ತೊಮ್ಮೆ ಶಾಂತಿಯನ್ನು ಕೋರಿ ನೀವು ತಂದಿರುವಂತಹ ಈ ಸಂತಾಪಸೂಚಕ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಇವತ್ತು ತಾವು ತಂದಿರುವಂತಹ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು ಒಂದು ಹೋರಾಟದ ಹಿನ್ನಲೆ ಇಟ್ಟುಕೊಂಡು ಬಂದಂತವರಾಗಿದ್ದಾರೆ. ಶ್ರೀಯುತರು ರೈತಸಂಘದ ಅಭ್ಯರ್ಥಿಯಾಗಿ 1945ದಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಆಯ್ಕೆಯಾಗಿ ಬಂದವರಾಗಿದ್ದಾರೆ. 1952 ರಲ್ಲಿ ಪ್ರಜಾ ಸೋಷಲಿಸ್ಟ ಪಕ್ಷದಿಂದ ಮೈಸೂರು ವಿಧಾನಸಭೆಗೆ ಆಯ್ಕೆಯಾಗಿದ್ದರು.

ಅಧ್ಯಕ್ಷರು: ಪ್ರಜಾಸೋಷಲಿಸ್ಟ ಪಾರ್ಟಿ ಬಂದಿದ್ದೆ 1952ರ ಮೊದಲೇ ಕೆಎಂಪಿಸಿ ಎಂದು ಇತ್ತು. ಆಮೇಲೆ ನಮ್ಮದು ಸೋಷಲಿಸ್ಟ ಪಾರ್ಟಿ ಇತ್ತು. ಆ ಎರಡು ಪಾರ್ಟಿಗಳು ಮರ್ಜ್ ಆದವು. ಮರ್ಜ ಆದನಂತರ ಪಿಎಸ್‌ಪಿ ಎಂದು ಆಯಿತು. ಈ ಬಗ್ಗೆ ತಾವು ಸ್ವಲ್ಪ ನೋಡಿಕೊಂಡು ಮಾತನಾಡಬಹುದು.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೆ ಏನಾದರೂ ಈ ಬಗ್ಗೆ ತಿದ್ದುಪಡಿ ಇದ್ದರೆ ತಿದ್ದುಪಡಿ ಮಾಡಿಕೊಳ್ಳೋಣ. ಆಗ ಪಿಎಸ್‌ಪಿ ಯಿಂದ ಬಹಳ ಜನ ಆರಿಸಿಬಂದಿದ್ದರು. ಪ್ರಜಾಸೋಷಲಿಸ್ಟ್ ಪಾರ್ಟಿಯಿಂದ 1952 ನೇ ಇಸವಿ ನಂತರ 1960ರ ದಶಕದಲ್ಲಿ ಬಹಳಷ್ಟು ಜನರು ಪ್ರಜಾಸೋಷಲಿಸ್ಟ್ ಪಾರ್ಟಿಯಿಂದ ಆರಿಸಿ ಬಂದಿದ್ದರು. ಪ್ರಜಾಸೋಷಲಿಸ್ಟ್ ಸಮಾಜವಾದಿ ಚಳುವಳಿಯ ಹಿನ್ನಲೆ ಇಟ್ಟುಕೊಂಡು ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರೆ ಅವತ್ತು ಜನಪರವಾಗಿ ಹೋರಾಟವನ್ನು ಮಾಡಿದವರಾಗಿದ್ದಾರೆ. ನಾನು ಇಲ್ಲಿ ಪ್ರಮುಖವಾಗಿ ಹೇಳುವುದು ಸ್ವಾತಂತ್ರ ಸಿಕ್ಕನಂತರ ಎಲ್ಲಾ ಕಡೆಯಲ್ಲಿಯೂ

ಕಾಂಗ್ರೆಸ್ ಪಕ್ಷದ ವಾತಾವರಣವಿದ್ದಂತಹ ಸಂದರ್ಭದಲ್ಲಿ ಜನಪರವಾದಂತಹ ಹೋರಾಟಗಳನ್ನು ಮಾಡಿ ಸಮಾಜವಾದಿ ಚಳುವಳಿಯನ್ನು ಮಾಡಿ ಸಮಾಜವಾದಿ ಪಕ್ಷದ ವತಿಯಿಂದ ಆರಿಸಿ ಬರುವುದು ಅವತ್ತಿನ ಸಂದರ್ಭದಲ್ಲಿ ಬಹಳ ದೊಡ್ಡ ಕೆಲಸ. 1950–60ರ ದಶಕದಲ್ಲಿ ಒಂದು ಸಮಾಜವಾದಿ ಹಿನ್ನಲೆಯನ್ನಿಟ್ಟುಕೊಂಡು ಬಂದವರು ಅವರು ಜನರ ಬೆಂಬಲವನ್ನು ತೆಗೆದುಕೊಂಡು ಕಾಂಗ್ರೆಸ್ಸಿನ ಅಲೆಯ ವಿರುದ್ದ ಆರಿಸಿ ಬರುತ್ತಾರೆಂದರೆ ಅದು ಆ ಸಂದರ್ಭದಲ್ಲಿ ದೊಡ್ಡ ಸಾಧನೆಯಾಗಿದೆ ಎಂದು ಹೇಳುತ್ತಿದ್ದೇನೆ. ಹೀಗಾಗಿ ಆ ರೀತಿಯಾದಂತಹ ಜನಮನ್ನಣೆ ಪಡೆದುಕೊಂಡಂತಹ ವ್ಯಕ್ತಿ ಶ್ರೀ ಮುಲ್ಕಾ ಗೋವಿಂದ ರೆಡ್ಡಿಯಾಗಿದ್ದರು. 1958–1982ರವರೆಗೆ continuously ರಾಜ್ಯಸಭಾ ಸದಸ್ಯರಾಗಿ ಆರಿಸಿ ಬಂದಿದ್ದಾರೆಂದರೆ ಅದು ಒಂದು ದೊಡ್ಡ ಸಾಧನೆಯಾಗಿದೆ. ಆ ರೀತಿಯಾದ ಒಂದು ಜನಪ್ರಿಯತೆಯನ್ನು ಶ್ರೀಯುತ ಮುಲ್ಕಾ ಗೋವಿಂದರೆಡ್ಡಿಯವರು ಇಟ್ಟುಕೊಂಡಿದ್ದರು ಇದು ಒಂದು ಸಾಕ್ಷಿ ಎನ್ನುವಂತಹ ಮಾತನ್ನು ಹೇಳುತ್ತೇನೆ. ರಾಜ್ಯಸಭೆಯ 100 ಅಧಿವೇಶನಗಳಲ್ಲಿ ಭಾಗವಹಿಸಿದ್ದರು. ಹೀಗಾಗಿ ಅವರಿಗೆ ಒಂದು ಗೌರವವು ಸಲ್ಲುತ್ತದೆ. ನಮ್ಮ ರಾಜ್ಯ ವಿಧಾನಸಭೆಗೆ 60 ವರ್ಷ ಸಂದ ಸಂದರ್ಭದಲ್ಲಿ ಅವರಿಗೆ ಪ್ರಥಮ ಸದಸ್ಯರಾಗಿ ನಾವು ಸನ್ಮಾನ ಮಾಡಿರುವುದು ನಮಗೆಲ್ಲರಿಗೂ ನೆನಪು ಇದೆ. ನಾನು ಕೂಡ ಆ ಸಂದರ್ಭದಲ್ಲಿ ಭಾಗವಹಿಸಿದ್ದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ರೀತಿಯಾಗಿ ಸಮಾಜವಾದಿ ಚಹಳುವಳಿಯಲ್ಲಿ ಜನಪರವಾದಂತಹ ಕೆಲಸವನ್ನು ಮಾಡಿದಂತಹ ಇಂತಹ ವ್ಯಕ್ತಿಗಳಿಗೆ ಅವರು ಸಮಾಜಕ್ಕೆ ಕೊಟ್ಟಂತಹ ಮಾರ್ಗದರ್ಶನ ಮತ್ತು ಸಂದೇಶ ಇದೆ ಆ ರೀತಿಯಾಗಿ ಜನಪ್ರತಿನಿಧಿಗಳು ನಡೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.. ಅಂತಹ ವ್ಯಕ್ತಿಗಳಿಗೆ ಕೊಡುವಂತಹ ಗೌರವ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎ. ಚನ್ನೇಗೌಡರು ಅವರು ಸಹ 1967ರಲ್ಲಿ ವಿಧಾನಸಭೆಗೆ 1967ರಲ್ಲಿ ಪಾಂಡವಪುರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದರು. ಶ್ರೀಯುತರು ಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದರು. ಇವರು ಸಹಕಾರ ರಂಗದಲ್ಲಿ ಹೆಚ್ಚು ಕೆಲಸ ಮಾಡಿದಂತಹ ಶ್ರೀಯುತರು ನಮ್ಮನ್ನು ಅಗಲಿದ್ದಾರೆ.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಇವರ ಬಗ್ಗೆ ಹೇಳುವುದಾದರೆ ಇವತ್ತು ಕರ್ನಾಟಕದ ಜನಮಾನಸದಲ್ಲಿ ಅದರಲ್ಲಿಯೂ ಮೈಸೂರು ಭಾಗದಲ್ಲಿ ಶ್ರೀಯುತರು ಆ ಒಂದು ಮಹಾರಾಜರ ಸಂಸ್ಥಾನದ ಎಲ್ಲಾ ಹಿಂದಿನ ಮಹಾರಾಜರುಗಳು ಇವತ್ತು ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ. ಬಹುಶ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದಂತಹ ಲಕ್ಷಾಂತರ ಜನರನ್ನು ನೋಡಿದಾಗ ಅವರ ಬಗ್ಗೆ ಮತ್ತು ಮಹಾರಾಜರ ಮನೆತನದ ಬಗ್ಗೆ ಇರುವಂತಹ ಅಪಾರವಾದಂತಹ ಗೌರವ ಜನಮಾನಸದಲ್ಲಿ ಯಾವ ರೀತಿಯಾಗಿತ್ತು ಎಂಬುವುದರ ಬಗ್ಗೆ ಅವತ್ತಿನ ಅಂತ್ಯಕ್ರಿಯೆಯು ಒಂದು ಸಾಕ್ಷಿಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಾವು ಹಲವಾರು ಬಾರಿ ಅವರನ್ನು ನೆನಪು ಮಾಡಿಕೊಳ್ಳುತ್ತೇವೆ. ಇವತ್ತಿನದಿವಸ ಮೈಸೂರಿನಲ್ಲಿರುವಂತಹ ವಿಶಾಲವಾದಂತಹ ರಸ್ತೆಗಳು, ಅಲ್ಲಿರುವಂತಹ ಹಲವಾರು ಯೋಜನೆಗಳು, ಅದರಲ್ಲಿ ಒಳಚರಂಡಿ ವ್ಯವಸ್ಥೆ ಇರಬಹುದು ಮತ್ತೊಂದು ಇರಬಹುದು. ಬಹುಶಃ ಇವತ್ತಿನ ಒಂದು ವ್ಯವಸ್ಥೆಯಲ್ಲಿ ಅಂತಹ ಉತ್ತಮವಾದಂತಹ ರಸ್ತೆಗಳನ್ನು, ಆ ರೀತಿಯಾದಂತಹ ಒಳಚರಂಡಿ ವ್ಯವಸ್ಥೆಯನ್ನು ಆ ರೀತಿಯಾಗಿ plan ಮಾಡಿ ಮಾಡುವಂತಹದನ್ನು ಇವತ್ತು ಕೂಡ ಆಗಲಾರದಂತಹ ಪರಿಸ್ಥಿತಿಯಲ್ಲಿದ್ದಂತಹ ಸಂದರ್ಭದಲ್ಲಿ ಮಹಾರಾಜರ ಕಾಲದಲ್ಲಿ ಯಾವ ರೀತಿಯಾಗಿ ಒಂದು ವ್ಯವಸ್ಥೆಯನ್ನು ಮಾಡಿದ್ದರು ಇದು ಒಂದು ಉದಾಹರಣೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೇವಲ ಸಂಸ್ಥಾನಗಳನ್ನು ನಡೆಸುವುದು, ಕೇವಲ ಒಂದು ರಾಜ್ಯಾಡಳಿತ ಮಾಡುವುದು ಅಷ್ಟೇ ಅಲ್ಲದೆ ಉತ್ತಮವಾದಂಥಹ ವ್ಯವಸ್ಥೆ,

ಮೂಲಭೂತ ಸೌಕರ್ಯಗಳನ್ನು ಜನರಿಗೆ ಯಾವ ರೀತಿ ಕೊಡಲಿಕ್ಕೆ ಸಾಧ್ಯವೆಂದು ತೋರಿಸಿಕೊಟ್ಟಂಥವರು ಮಹಾರಾಜರ ಆಡಳಿತ ಎಂದು ನಾನು ಹೇಳಬಯಸುತ್ತಿದ್ದೇನೆ. ಹೀಗಾಗಿ ಇವತ್ತು ಮೈಸೂರು ಮಹಾರಾಜರ ಬಗ್ಗೆ ಜನಮಾನಸದಲ್ಲಿ ಗೌರವ ಇರುವುದಕ್ಕೆ ಕಾರಣವೇನೆಂದರೆ ಈ ರೀತಿಯಾದಂಥ ಸುಧಾರಣೆಗಳು, ಸಮಾಜಕ್ಕೆ ಕೊಟ್ಟಂಥ ಸೇವೆ ಮತ್ತು ನೀರಾವರಿ ಯೋಜನೆಗಳಿಗೆ ಕೊಟ್ಟಂಥ ಒಂದು ಕಾಣಿಕೆ ಇವೆಲ್ಲದರಿಂದ ಆ ಒಡೆಯರ ಮನೆತನ ಇವತ್ತಿಗೂ ಜನಮಾನಸದಲ್ಲಿದೆ. ಅಭಿವೃದ್ಧಿಗಳು ಯಾವ ರೀತಿ ನಡೆಯಬೇಕೆನ್ನುವುದಕ್ಕೆ ಒಂದು ಉದಾಹರಣೆಯಾಗಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರು ಜೀವಂತ ಇರುವಂಥ ಸಂದರ್ಭದಲ್ಲಿ, ನಾನು ಮುಖ್ಯಮಂತ್ರಿಯಾಗಿ ಕೆಲಸ ಮಾಡುವಾಗ ಮತ್ತು ಸಚಿವನಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಮೂರು ನಾಲ್ಕು ಬಾರಿ ನನ್ನ ಜೊತೆಯಲ್ಲಿ ಅವರು ಮಾತನಾಡಿದ್ದರು. ಅವರಿಗೆ ಒಂದು ಕೊರಗು ಇತ್ತು. ಅವರ properties disputes ನಲ್ಲಿ ಇತ್ತು. ಅದರ ಬಗ್ಗೆ ಏನು ಕೋರ್ಟು ಕಛೇರಿಗಳಲ್ಲಿ disputes ನಡೆದಿವೆ. ಅದರ ಬಗ್ಗೆ ಏನಾದರೂ ಒಂದು ಅಂತಿಮ ತೀರ್ಮಾನವಾಗಿ ಆ ಸಮಸ್ಯೆಗಳಿಂದ ನಾನು ಹೊರಗೆ ಬರಬೇಕು ಎಂಬ ಕೊರಗು ಅವರಲ್ಲಿದ್ದುದ್ದನ್ನು ನಾನು ನೋಡಿದ್ದೇನೆ. ಹೀಗಾಗಿ ಆ ರೀತಿಯಾದಂಥ ಕೊರಗು ಇದ್ದಂಥ ಸಂದರ್ಭದಲ್ಲಿ ಅವರಿಗೇನಾದರೂ ಪರಿಹಾರ ಕೊಡುವಂಥ ಕೆಲಸವಾದರೆ ಬಹಳ ಒಳ್ಳೆಯದು ಎಂಬ ಅಭಿಪ್ರಾಯವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದೇನೆ. ಹೀಗಾಗಿ ಇವತ್ತು ಶ್ರೀಕಂಠದತ್ತ ಒಡೆಯರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ, ಒಡೆಯರ ಅಗಲಿಕೆಯಿಂದ ಅವರ ಕುಟುಂಬ ವರ್ಗಕ್ಕೆ ಧೈರ್ಯವನ್ನು ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಡಾ॥ ಜಿ.ಎಸ್. ಶಿವರುದ್ರಪ್ಪನವರು ಹಿರಿಯ ಕವಿಗಳು, ರಾಷ್ಟ್ರ ಕವಿಗಳು ಇವರ ಬಗ್ಗೆ ಕರ್ನಾಟಕದ ಇಡೀ ಸಾಹಿತ್ಯ ರಂಗದಲ್ಲಿ ಇವತ್ತು ಅಪಾರವಾದ ಗೌರವ ಪ್ರತಿಯೊಬ್ಬರಲ್ಲಿಯೂ ಇದೆ. ಅವರ ಕವನ ಸಂಕಲಗಳು ಇರಬಹುದು. ಅವರು ಹಲವಾರು ಕೃತಿಗಳು, ಲೇಖನಗಳಿರಬಹುದು, ಕಾವ್ಯ ಸಂಗ್ರಹಗಳು, ಗದ್ಯ ಕೃತಿಗಳು ಇರಬಹುದು, ಎಲ್ಲವೂ ವೈಚಾರಿಕ ಹಿನ್ನಲೆಯಲ್ಲಿ ತೆಗೆದುಕೊಂಡು ಬರೆದಂಥವು. ಪೂರ್ಣವಾಗಿ ವೈಚಾರಿಕವಾಗಿ ವಿಚಾರ ಮಾಡುವಂಥ ವ್ಯಕ್ತಿ ಜಿ.ಎಸ್. ಶಿವರುದ್ರಪ್ಪನವರು. ಯಾವುದೇ ಧಾರ್ಮಿಕ ವಿಧಿ ವಿಧಾನಗಳು ಇಲ್ಲದೇನೆ ತಮ್ಮ ಅಂತ್ಯಕ್ರಿಯೆ ನಡೆಯಬೇಕೆಂಬ ಅವರ ಏನೊಂದು ಭಾವನೆಗಳನ್ನು ವ್ಯಕ್ತಪಡಿಸಿದರು. ಇದರಿಂದ ಒಳ್ಳೆಯ ವೈಚಾರಿಕತೆಯನ್ನು ಆರ್ಥ ಮಾಡಿಕೊಳ್ಳುವ ಸಾಧ್ಯವಿದೆ. ಅವರು ಕನ್ನಡ ನಾಡಿನ ಸಾಹಿತ್ಯಕ್ಕೆ ಮತ್ತು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮತ್ತು ಈ ಒಂದು ಸಾಹಿತ್ಯ ರಂಗಕ್ಕೆ ಏನೊಂದು ಕೊಡುಗೆಯನ್ನು ಕೊಟ್ಟಿದ್ದಾರೆ ಅದು ನಮ್ಮ ಯುವ ಜನಾಂಗಕ್ಕೆ ಮತ್ತು ಸಾಹಿತ್ಯಾಸಕ್ತರಿಗೆ ಯಾವಾಗಲೂ ಅದು ಸ್ಥಿರಸ್ಥಾಯಿಯಾಗಿ ಉಳಿಯಬೇಕು ಮತ್ತು ಬರುವಂಥ ದಿವಸಗಳಲ್ಲಿ ಅವರಿಗೆ ಹೆಚ್ಚಿನ ರೀತಿಯಾದಂಥ ಗೌರವ ಸಿಗಬೇಕು. ಅವರ ನೆನಪು ಸದಾ ಸ್ಥಿರಸ್ಥಾಯಿಯಾಗಿ ಉಳಿಯಬೇಕು ಎಂಬ ಆಶಯವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಲ್ಲಿ, ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೇಂದರೆ, ಅವರ ಒಂದು ಸ್ಮರಣೆ ಸದಾಕಾಲ ಇರುವ ದೃಷ್ಟಿಯಿಂದ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇರಬಹುದು ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಇರಬಹುದು ಅವರ ಹೆಸರಿನಲ್ಲಿ ಒಂದು ಅಧ್ಯಯನ ಪೀಠವನ್ನು ನಿರ್ಮಾಣ ಮಾಡುವುದಾದರೆ ಅವರ ಒಂದು ಸಾಹಿತ್ಯ ಚಟುವಟಿಕೆಗಳು ಮತ್ತು ಅವರ ಒಂದು ಕಾವ್ಯಗಳು ಸದಾ ನೆನಪಿನಲ್ಲಿ ಉಳಿಯಲಿಕ್ಕೆ ಸಾಧ್ಯವಿದೆ. ಆ ರೀತಿ ಇವತ್ತು ಸರ್ಕಾರ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಏನಾದರೂ ಒಂದು ಸ್ಮಾರಕವನ್ನು ನಿರ್ಮಾಣ ಮಾಡಬೇಕು, ಅಧ್ಯಯನ ಪೀಠವನ್ನು ನಿರ್ಮಾಣ ಮಾಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು

ಮಾಡುತ್ತಿದೇನೆ. ಹೀಗಾಗಿ ಅಂಥ ಒಬ್ಬ ರಾಷ್ಟ್ರಕವಿಯ ಅಗಲಿಕೆಯು ನಮ್ಮ ಸಾಹಿತ್ಯ ರಂಗಕ್ಕೆ ದೊಡ್ಡ ನಷ್ಟವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಡಾ॥ ಅಕ್ಕಿನೇನಿ ನಾಗೇಶ್ವರರಾವ್ ಒಂದು ಜನಪ್ರಿಯತೆ ಎ.ಎನ್.ಆರ್. ಎಂದು ಇದೆ. ಅಲ್ಲಿ ಎ.ಎನ್.ಆರ್., ಎನ್.ಟಿ.ಆರ್. ಇವೆಲ್ಲ ಆ ಒಂದು ಚಲನಚಿತ್ರ ರಂಗದ ನಟರ ಜನಪ್ರಿಯತೆಗೆ ಒಂದು ಸಾಕ್ಷಿ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಹಲವಾರು ಚಲನಚಿತ್ರಗಳು, ಅವರು ಪಾತ್ರ ಮಾಡಿದ ದೇವದಾಸ್ ಚಿತ್ರವಿರಬಹುದು ಇನ್ನಿತರ ಹಲವಾರು ಚಲನಚಿತ್ರಗಳು ಇವತ್ತಿಗೂ ಅವರೊಬ್ಬ ಮೇರುನಟ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಆ ರೀತಿ ಮೇರು ನಟ ಇದ್ದುದ್ದರಿಂದಲೇ ಬಹುಶ: ಇವತ್ತಿಗೂ ಸಹಿತ ಆಂಧ್ರಪ್ರದೇಶದಲ್ಲಿ ಹಾಗು ಬೇರೆ ರಾಜ್ಯಗಳಲ್ಲಿಯೂ ಸಹಿತ ಅವರ ಅಭಿಮಾನಿಗಳು ಕರ್ನಾಟಕ ರಾಜ್ಯದಲ್ಲಿಯೂ ಸಹಿತ ಎ.ಎನ್.ಆರ್.ಅಭಿಮಾನಿ ಬಳಗ ಬಹಳ ದೊಡ್ಡ ಪ್ರಮಾಣದಲ್ಲಿದೆ. ಹಾಗಾಗಿ ಅಪಾರವಾದಂಥ ಅಭಿಮಾನಿ ಬಳಗವನ್ನು ಅವರು ಬಿಟ್ಟು ಹೋಗಿದ್ದಾರೆ. ಅಂಥ ಒಬ್ಬ ಪ್ರತಿಭಾವಂಥ ನಟರನ್ನು ಇವತ್ತು ಕಳೆದುಕೊಂಡಿದೇವೆಂಬ ಮಾತನ್ನು ನಾನು ಹೇಳಬಯಸುತ್ತೇನೆ. ಚಲನಚಿತ್ರ ರಂಗದಲ್ಲಿ ತಂದೆ, ಮಗ, ಮೊಮ್ಮಗ ಈ ಮೂರು ಜನ ಆ ಇಡೀ ಕುಟುಂಬದ ಸದಸ್ಯರು ಇತ್ತೀಚಿನ ಚಲನಚಿತ್ರದಲ್ಲಿದ್ದು, ತಂದೆ, ಮಗ ಮತ್ತು ಮೊಮ್ಮಗನ ಪಾತ್ರವನ್ನು ಅವರೇ ಮಾಡಿದ್ದನ್ನು ನಾವೆಲ್ಲ ಇವತ್ತು ನೋಡುತ್ತಿದ್ದೇವೆ. ಆ ರೀತಿ ಚನಲನಚಿತ್ರಗಳು ಸಹಿತ ಇತ್ತೀಚೆಗೆ ಬಿಡುಗಡೆ ಆಗುವುದನ್ನು ನಾವು ನೋಡುತ್ತಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ.

ಶ್ರೀ ಯಶವಂತ ಹಳಬಂಡಿಯವರು ಧಾರವಾಡದಲ್ಲಿ ಹುಟ್ಟಿ ಬೆಳೆದವರು, ಇವತ್ತು ತಮ್ಮ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಸುಗಮ ಸಂಗೀತಕ್ಕೆ ಹೆಚ್ಚಿನ ರೀತಿ ಸೇವೆಯನ್ನು ಮಾಡಿದವರು. ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಮೂಡಲಮನೆ ಹಾಡನ್ನು ಹಾಡುವುದರ ಮೂಲಕ ಅತ್ಯಂತ ಜನಪ್ರಿಯವಾದಂಥ ಹಾಡು ಹಾಡಿ ಜನಪ್ರಿಯತೆಯನ್ನು ಸಂಗೀತಗಾರರಲ್ಲಿ

ಮೂಡಿಸಿದ್ದಾರೆಂಬ ಮಾತನ್ನು ನಾನು ಹೇಳಬಯಸುತ್ತೇನೆ. ಸುಗಮ ಸಂಗೀತ ಮತ್ತು ಭಾವಗೀತೆ ಇದಕ್ಕೆ ಹೆಚ್ಚು ಒತ್ತು ಕೊಟ್ಟು ಅವರ ಒಂದು ವಿಶಿಷ್ಟ ಕಂಠದಿಂದ ಆ ಒಂದು ಹಾಡಿನ ಮೂಲಕ ನಮ್ಮ ಸಾಸ್ಕೃತಿಕ ಪರಂಪರೆಯನ್ನು ಬಿಂಬಿಸುವಂಥ ಕೆಲಸವನ್ನು ಇವತ್ತು ಅವರು ಮಾಡಿದ್ದಾರೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಯಶವಂತ ಹಳಬಂಡಿಯವರದು ಇವತ್ತು ಸಾಯುವಂಥ ವಯಸ್ಸಲ್ಲ. ಆದರೆ ಆಕಸ್ಮಿಕವಾಗಿ ಇವತ್ತು ಅವರು ಸಾವನ್ನು ಅಪ್ಪಿದ್ದಾರೆ. ಹೀಗಾಗಿ ಅವರ ಅಗಲಿಕೆಯಿಂದಲೂ ಸಹಿತ ಸುಗಮ ಸಂಗೀತದ ಕ್ಷೇತ್ರದಲ್ಲಿ ನಷ್ಟವಾಗಿದೆ. ಧಾರವಾಡ ಗಂಗೂಬಾಯಿ ಹಾನಗಲ್, ಭೀಮಸೇನ್ ಜೋಶಿ ಈ ರೀತಿ ಹಲವಾರು ದಿಗ್ಗಜರುಗಳನ್ನು ಹೊಂದಿರುವ ಕ್ಷೇತ್ರ ಅಂಥ ಧಾರವಾಡದಿಂದ ಯಶವಂತ ಹಳಬಂಡಿಯವರು ಬಂದಿದ್ದಾರೆ. ಅವರ ಅಗಲಿಕೆಯಿಂದ ಸಂಗೀತ ಲೋಕಕ್ಕೆ ಬಹಳಷ್ಟು ನಷ್ಟವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಹೀಗಾಗಿ ಇವತ್ತು ಅಗಲಿರುವ ಮಹನೀಯರುಗಳಿಂದ ಅವರವರ ಕ್ಷೇತ್ರಗಳಲ್ಲಿ, ರಾಜ್ಯದ ಸಾಮಾಜಿಕ ಕ್ಷೇತ್ರದಲ್ಲಿ ಹೆಚ್ಚಿನ ರೀತಿಯಾಗಿ ನಷ್ಟವಾಗಿದೆ ಎಂದು ಹೇಳುತ್ತಿದ್ದೇನೆ. ಈ ಒಂದು ಎಲ್ಲ ಮಹನೀಯರ ಆತ್ಮಕ್ಕೆ ಶಾಂತಿಯನ್ನು ನಾನು ಕೋರುತ್ತಿದ್ದೇನೆ. ಇವತ್ತು ಅಗಲಿರುವ ಎಲ್ಲ ಮಹನೀಯರ ಕುಟುಂಬ ವರ್ಗದವರಿಗೆ ಧೈರ್ಯ ತುಂಬುವಂಥ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆಯನ್ನು ಮಾಡಿ ತಮ್ಮ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):- ಮಾನ್ಯ ಸಭಾಧ್ಯಕ್ಷರೆ, ಮೊದಲಿಗೆ ಮುಲ್ಕಾ ಗೋವಿಂದ ರೆಡ್ಡಿಯವರ ಸಾವು ಒಂದು ನಷ್ಟ ಜೊತೆಗೆ ನಮಗೆ ಒಂದು ಸಂದೇಶ ಕೂಡ. ಸಮಾಜವಾದಿ ಚಳವಳಿಯಿಂದ ಬಂದವರು, ರೈತ ಸಂಘದಿಂದ ಆಯ್ಕೆಯಾಗಿದ್ದವರು ಮೊಟ್ಟ ಮೊದಲಿಗೆ ಅವರ ಪ್ರವೇಶ ರೈತರ ಸಂಘದಿಂದ ಆಗಿತ್ತು. ಶ್ರೀ ಪುಟ್ಟಣ್ಣಯ್ಯ ಇಲ್ಲಿದ್ದಾರೆ ಸಮಾಜವಾದಿ ಚಳುವಳಿಯಿಂದ ಬಂದವರು ಎಂದರೆ ಹಾಗಾಗಿ ಎಲ್ಲೋ ಒಂದು ಕಡೆ ಇವತ್ತು ಅಂಥ ಜನಪರವಾಗಿರುವ ಹೋರಾಟಗಳು, ಜನಪರವಾಗಿರುವ

ಚಳವಳಿಗಳು ಅದರಲ್ಲಿಯೂ ರೈತರು ಮತ್ತು ಸಮಾಜವಾದಕ್ಕೆ ಒತ್ತು ಕೊಡುವಂಥ ಚಳವಳಿಗಳು ನಿಸ್ತೇಜವಾಗುತ್ತಿವೆಯೇನೋ ಎನ್ನುವಂಥ ಒಂದು ಆತಂಕದ ವಾತಾವರಣ ಸೃಷ್ಠಿಯಾಗಿರುವ ಸಂದರ್ಭದಲ್ಲಿ ಮುಲ್ಕಾ ಗೋವಿಂದ ರೆಡ್ಡಿಯವರ ಬದುಕು, ಹೋರಾಟ, ಶಾಸನಸಭೆಗೆ ಅವರ ಪ್ರವೇಶ ಈಗ ಇನ್ನು ಕೂಡ ಒಂದು ರೀತಿಯಾದ ಆಶಾಕಿರಣವಾಗಿದೆ ಎಂದು ನಾನು ಭಾವಿಸುತ್ತೇನೆ. ಹಾಗಾಗಿ ಅವರ ಆತ್ಮಕ್ಕೆ ಯಾವಾಗ ಶಾಂತಿ ಸಿಗುತ್ತದೆಂದರೆ ಇಂಥ ಜನಪರವಾದ ಚಳವಳಿಗಳು ಹೆಚ್ಚು ಕಸುವು, ಸತ್ವವನ್ನು ಪಡೆದುಕೊಂಡರೆ ಆಗ ನಿಜವಾಗಲೂ ಕೂಡ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆಂದು ನಾನು ಭಾವಿಸುತ್ತೇನೆ. ಅವರ ಅಗಲಿಕೆಯನ್ನು ಈ ಅರ್ಥದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಶ್ರೀ ಚನ್ನೇಗೌಡರ ಕೊನೆಯ ದಿನಗಳಲ್ಲಿ ನನಗೆ ಅವರ ಆತ್ಮೀಯತೆ ಇತ್ತು. ಅಂತಿಮ ದಿನಗಳಲ್ಲಿಯೂ ಕೂಡ ರೈತರ ಪರವಾಗಿರುವ ಚಿಂತಕರಾಗಿದ್ದರು, ಶಿಸ್ತುಬದ್ಧ ಜೀವನ ನಡೆಸಿದ್ದರು, ಹಾಗಾಗಿ ವ್ಯಯಕ್ತಿಕವಾಗಿ ಅವರು ನನಗೆ ಪರಿಚಿತರಾಗಿದ್ದರು. ಹಾಗಾಗಿ ಅವರ ಅಗಲಿಕೆ ಕೂಡ ನನಗೆ ಬಹಳ ನೋವನ್ನುಂಟು ಮಾಡಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಅಕ್ಕಿನೇನಿ ನಾಗೇಶ್ವರರಾವ್‌ರವರು ನಮಗೆಲ್ಲಾ ಒಂದು ದಂತ ಕಥೆ, ಹಾಗಾಗಿ ಅವರಿಗೆ ಭಾಷೆಯ ಗಡಿ ಇಲ್ಲ, ಆ ಚಲನಚಿತ್ರ ರಂಗ ಜಾತಿ ಭಾಷೆಗಳ ಗಡಿ ಮೀರದ ವ್ಯಕ್ತಿತ್ವಗಳವು. ಅಂಥ ಜಾತಿ, ಭಾಷೆಗಳ ಗಡಿ ಮೀರದ ಈ ಭಾರತದ ಸಾಂಸ್ಕ್ರತಿಕ ವಲಯದ ಜೀವಂತ ವ್ಯಕ್ತಿ, ಅವರ ಆತ್ಮಕ್ಕೂ ಕೂಡ ನಾನು ಶಾಂತಿಯನ್ನು ಕೋರುತ್ತೇನೆ. ಯಶವಂತ ಹಳಿಬಂಡಿಯವರು ಕೂಡ ಈ ಸುಗಮ ಸಂಗೀತ ಕ್ಷೇತ್ರದೊಳಗೆ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಹೆಸರು ಮಾಡಿದವರು, ಅವರ ನಿನ್ನೆ ದಿವಸ ನಿಧನರಾಗಿರುವುದು ಒಂದು ರೀತಿ ಸಾಂಸ್ಕೃತಿಕ ಲೋಕಕ್ಕೆ ದೊಡ್ಡ ನಷ್ಟವಾಗಿದೆ, ಅದರಲ್ಲಿಯೂ ಕೂಡ ಅನೇಕ ಕವಿಗಳಿಗೆ, ಮಾತುಗಳಿಗೆ ಧ್ವನಿಯಾಗಿದ್ದಂಥ ಯಶವಂತ ಹಳಬಂಡಿಯವರ ನಿಧನಕ್ಕೆ ನಾನು ತೀವ್ರವಾದ ಸಂತಾಪ ಹಾಗು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಬಹಳ ಮುಖ್ಯವಾಗಿ ಹೇಳುವುದಾದರೆ ರಾಷ್ಟ್ರಕವಿ ಡಾ|| ಜಿ.ಎಸ್. ಶಿವರುರುದ್ರಪ್ಪನವರ ಬಗ್ಗೆ ಹೇಳುವುದಾದರೆ ನನಗೂ ಹೆಮ್ಮೆ ಹಾಗೂ ನಿಮಗೂ ಹೆಮ್ಮೆ. ಕುವೆಂಪು ಮತ್ತು ಜಿ.ಎಸ್.ಎಸ್. ಇವರಿಬ್ಬರೂ ರಾಷ್ಟ್ರಕವಿಗಳಿಗೂ ಕೂಡ ನಿಮ್ಮ ಜಿಲ್ಲೆಯವರು ಎಂಬುದು ನಿಮಗೆ ಹೆಮ್ಮೆಯಾದರೆ, ಅವರಿಬ್ಬರೂ ಕೂಡ ನನ್ನ ಜಿಲ್ಲೆಯ ಅಳಿಯಂದಿರು ಎನ್ನುವುದು ನನಗೆ ಹೆಮ್ಮೆ. ಏಕೆಂದರೆ, ಕುವೆಂಪುರವರು ಕೂಡ ಚಿಕ್ಕಮಗಳೂರು ಜಿಲ್ಲೆಯ ಅಳಿಯಂದಿರು. ಹಾಗೆಯೇ ಡಾ|| ಜಿ.ಎಸ್. ಶಿವರುದ್ರಪ್ಪನವರು ಕೂಡ ನಮ್ಮ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯ ಅಳಿಯಂದಿರು. ಹಾಗಾಗಿ ನಿಮಗಿರುವಷ್ಟೇ ಹೆಮ್ಮೆ. . .

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಹಾಗಾದರೆ ಅಧ್ಯಕ್ಷರು ನೀವು ಬೀಗ–ಬೀಗರು.

ಶ್ರೀ ವೈ.ಎಸ್.ವಿ.ದತ್ತ (ಕಡೂರ):- ಹೌದು ನಾವು ಬೀಗ–ಬೀಗರು. ಮಾನ್ಯ ಅಧ್ಯಕ್ಷರೆ, ಹಾಗಾಗಿ ನಾವು ನೀವು ಬೀಗ–ಬೀಗರು. ಹಾಗಾಗಿ ಮುಂದೆ ಜಾಸ್ತಿ ಟೈಮ್ ಕೊಡುತ್ತೇವೆ ಸ್ವಲ್ಪ ತಡೆಯಿರಿ. ಹಾಗಾಗಿ ನಾನು ಡಾ|| ಜಿ.ಎಸ್. ಶಿವರುದ್ರಪ್ಪನವರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಸಮಯಾವಕಾಶ ಜಾಸ್ತಿ ತೆಗೆದುಕೊಳ್ಳಬಾರದು ಎನ್ನುವ ಕಾರಣವಿದೆ. ಡಾ|| ಜಿ.ಎಸ್. ಶಿವರುದ್ರಪ್ಪನವರಿಗೆ ಮೂಲತ:ವಾಗಿ ಪ್ರೇರಕ–ಕಾರಕ ಶಕ್ತಿಯೆಂದರೆ ರಾಷ್ಟ್ರಕವಿ ಕುವೆಂಪುರವರು ಆಗಿದ್ದಾರೆ. ಕುವೆಂಪುರವರನ್ನು ಒಬ್ಬರು ಕವಿ ಎನ್ನುವುದಕ್ಕಿಂತ ಹೆಚ್ಚಾಗಿ ಒಬ್ಬರು ವಿಚಾರವಾದಿ ಎಂದು ನಾವು ಇಷ್ಟಪಡುತ್ತೇವೆ. ಅವರ "ವಿಚಾರ ಕ್ರಾಂತಿಗೆ ಆಹ್ವಾನ", "ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ" ಎನ್ನುವಂತಹ ಪುಸ್ತಕಗಳಿಂದ ನಮ್ಮಂತಹ ಯುವಕರು, ಅನೇಕ ಜನರು ಪ್ರೇರಣೆ ಪಡೆದುಕೊಂಡಿದ್ದಾರೆ. ಹಾಗಾಗಿ ಕುವೆಂಪುರವರ ಗರಡಿಯಲ್ಲಿ ಡಾ|| ಜಿ.ಎಸ್.ಎಸ್.ರವರು ಬಂದಿದ್ದರಿಂದ ಅವರೂ ಕೂಡ ಅದೇ ರೀತಿಯ ವಿಚಾರವಾದವನ್ನು ಮೈಗೂಡಿಸಿಕೊಂಡಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ಒಂದು ನಿಮಿಷ ನೀವು ನನಗೆ ಅನುಮತಿ ಕೊಟ್ಟರೆ ನನ್ನ ಮಾತನ್ನು ಮುಗಿಸುತ್ತೇನೆ. ಡಾ|| ಜಿ.ಎಸ್. ಶಿವರುದ್ರಪ್ಪನವರ ಆತ್ಮಕ್ಕೆ ಶಾಂತಿಯನ್ನು

ಕೋರುವುದು ಹೇಗೆ ಎಂದರೆ, ಅವರು ಒಂದು ಪದ್ಯವನ್ನು ಬರೆದಿದ್ದಾರೆ. ಅವರು "ದುಸ್ವಪ್ನ" ಎಂದು ಒಂದು ಪದ್ಯವನ್ನು ಬರೆದಿದ್ದಾರೆ. ರಾಷ್ಟ್ರ ಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರು ತಾವು ಕಂಡ ಒಂದು ಕೆಟ್ಟ ಕನಸಿನ ಬಗ್ಗೆ ಒಂದು ಪದ್ಯ ಬರೆದಿದ್ದಾರೆ. ಆ ದು:ಸ್ವಪ್ನದ ನಾಲ್ಕು ಸಾಲಿನ ಪದ್ಯವನ್ನು ಓದುತ್ತೇನೆ. ರಾಷ್ಟ್ರ ಕವಿ ಜಿ.ಎಸ್.ಎಸ್ ಕಂಡ ಕೆಟ್ಟ ಕನಸು ಮತ್ತೆ ನಮ್ಮನ್ನು ಯಾರನ್ನು ಕಾಣದ ಹಾಗೆ ನಾವೆಲ್ಲಾ ನೆಟ್ಟಗೆ ಆದರೆ ಬಹುಶ: ನಾವೆಲ್ಲಾ ಅವರಿಗೆ ಒಳ್ಳೆಯ ಗೌರವ ಸಲ್ಲಿಸಿದ ಹಾಗೆ ಆಗುತ್ತದೆ. ದಯವಿಟ್ಟು ನನಗೆ ಆರು ಸಾಲಿನ ಪದ್ಯವನ್ನು ಓದುವುದಕ್ಕೆ ಅವಕಾಶ ಕೊಡಬೇಕು. ಇದು ಜಿ.ಎಸ್.ಎಸ್. ಕಂಡ ದುಃಸ್ವಪ್ನ. ಈ ದು:ಸ್ವಪ್ನ ನಮಗೆ ಯಾರಿಗೂ ಕಾಣಬಾರದು. ನಾವು ಯಾರು ಕೂಡ ಅಂತಹ ದು:ಸ್ವಪ್ನ ಕಾಣದ ಹಾಗೆ ಆಗಬೇಕು.

"ದುಃಸ್ವಪ್ನ"

"ಕಂಡೆ ಎಂಥೆಂಥಹವರೋ ಏನೇನೋ ಅದದ್ದು ಕಂಡೆ,

ಗೊಮ್ಮಟನಾಗಿ ನಿಂತಿದ್ದ ಮಹಾಮೂರ್ತಿ ಕರಗಿ ಕೊಚ್ಚೆಯಾಗಿ ಹರಿದಿದ್ದ ಕಂಡೆ,

ಇಂದ್ರನ ಐರಾವತಕ್ಕೆ ತೊಣಚಿ ಹತ್ತಿ ಬೀದಿ ನಾಯಿಗಾಗಿ ಬೂದಿಯಲ್ಲಿ ಹೊರಳಾಡಿದ್ದ ಕಂಡೆ,

ನಿಗಿನಿಗಿ ಉರಿದು ಉಜ್ವಲವಾದ ಮಾತೆಲ್ಲಾ ಬರೀ ಬೂದಿಯಾಗಿ ತೆಪ್ಪಗಾದದ್ದ ಕಂಡೆ,

ಕೊಳಕು ಮಂಡಲಕ್ಕೆ ಏಳು ಹೆಡೆ ಮೂಡಿ ಮಾನಸ ಸರೋವರದಲ್ಲಿ ಜಲಕ್ರೀಡೆಯಾದ್ದ ಕಂಡೆ,

ಕಾವಿಯೊಳಗೆ ಕೋವಿಯೆದ್ದು ತನ್ನನ್ನು ತಾನೇ ಕೊಂದುಕೊಂಡದ್ದ ಕಂಡೆ,

ಸರಸ್ವತೀ ಮಂದಿರದ ಶ್ವೇತ ಚಾಮರಗಳು ಕೆಲವು ಮಂತ್ರಿಗಳ ಮನೆಯ ಕಸಪೊರಕೆಯಾದದ್ದ ಕಂಡೆ,

ಹಠಕ್ಕಾಗಿ ಮಠ ಕಟ್ಟಿ ಜಗದ್ಗುರುಗಳಾದ ಸಾಹಿತಿಗಳನ್ನೂ ಕಂಡೆ,

ದೊಡ್ಡ ಪೀಠಗಳ ಮೇಲೆ ಸಣ್ಣ ಜನ ಇಲಿ–ಹೆಗ್ಗಣಗಳಾಗಿ ಹರಿದಾಡಿದ್ದ ಕಂಡೆ,

ಕಂಡು ಎಚ್ಚರಗೊಂಡೆ, ಎಚ್ಚರವೆಲ್ಲಾ ನಿಗಿನಿಗಿ ಉರಿವ ಕಂಡದ ಉಂಡೆ,"

ಇದು ಅವರು ಕಂಡ ದು:ಸ್ವಪ್ನ. ಇಂತಹ ದು:ಸ್ವಪ್ನ ನಮಗೆ ಯಾರಿಗೂ ಬೀಳದೇ ಇರುವಂತಹ ಸಮಾಜದ ವ್ಯವಸ್ಥೆಯಾದರೆ ಖಂಡಿತವಾಗಿಯೂ ಆ ರಾಷ್ಟ್ರ ಕವಿಗೆ ಒಳ್ಳೆಯ ಗೌರವ ಕೊಟ್ಟ ಹಾಗೆ ಆಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ರಾಮುಲು (ಬಳ್ಳಾರಿ ಗ್ರಾಮೀಣ):– ಮಾನ್ಯ ಅಧ್ಯಕ್ಷರೆ, ತಾವು ಏನು ಇಲ್ಲಿ ಸಂತಾಪ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ಬೆಂಬಲವನ್ನು ಕೋರುತ್ತಾ, ಬಹಳಷ್ಟು ಹಿರಿಯರು ಈ ಬಗ್ಗೆ ಮಾತನಾಡಿದ್ದಾರೆ. ದಿವಂಗತ ಮುಲ್ಕಾ ಗೋವಿಂದ ರೆಡ್ಡಿಯವರು ಒಬ್ಬ ದೊಡ್ಡ ಹೋರಾಟಗಾರರು. ಈಗಲೂ ಕೂಡ ಚಿತ್ರದುರ್ಗ ಜನರ ನಾಲಿಗೆಯ ಮೇಲೆ ಹರಿದಾಡುತ್ತಿರುವ ಹೆಸರು ಎಂದರೆ ದಿವಂಗತ ಮುಲ್ಕಾ ಗೋವಿಂದ ರೆಡ್ಡಿಯವರ ಹೆಸರು ಎನ್ನುವ ಮಾತನ್ನು ಹೇಳುತ್ತೇನೆ. ದಿವಂಗತ ಮುಲ್ಕಾ ಗೋವಿಂದ ರೆಡ್ಡಿಯವರು ಹೆಸರು ಚಿತ್ರದುರ್ಗ ಜಿಲ್ಲೆಯ ಜನರ ನಾಲಿಗೆಯ ಮೇಲೆ ಹರಿದಾಡುತ್ತಿರುವ ಹೆಸರಾಗಿದೆ. ಸಮಾಜ ಸೇವಕರಾಗಿ, ಶಾಸಕರಾಗಿ ಹಾಗೂ ಸಂಸದರಾಗಿ ಆ ಭಾಗದ ರೈತರ ಪರವಾಗಿ ಸಾಕಷ್ಟು ಕೆಲಸ ಮಾಡಿ ಹೆಸರು ಮಾಡಿದಂತಹ ವ್ಯಕ್ತಿಯಾಗಿದ್ದಾರೆ. ದಿವಂಗತ ಮುಲ್ಕಾ ರೆಡ್ಡಿಯವರು ರಾಜಕಾರಣದಲ್ಲಿ ಕೂಡ ಹೆಸರುವಾಸಿಯಾಗಿ, ಆ ಜಿಲ್ಲೆಯ ಆ ಭಾಗದ ಅಭಿವೃದ್ಧಿಗೋಸ್ಕರ ಹಾಗೂ ರೈತರ ಪರವಾಗಿ ಬಹಳಷ್ಟು ಹೋರಾಟ ಮಾಡಿದಂತಹ ವ್ಯಕ್ತಿಯಾಗಿದ್ದಾರೆ. ಅವರ ನಿಧನದಿಂದ ಕರ್ನಾಟಕ ರಾಜ್ಯದ ಆ ಭಾಗದಲ್ಲಿದ್ದಂತಹ ರೈತಾಪಿ ಜನರಿಗೆ ತುಂಬಲಾರದಂತಹ ನಷ್ಟವಾಗಿದೆ. ಅದೇ ರೀತಿಯಾಗಿ ದಿವಂಗತ ಎನ್.ಎ. ಚನ್ನೇಗೌಡರು ಕೂಡ ತಮಗೆ ಗೊತ್ತಿರುವ ಹಾಗೆ ಸಹಕಾರ ಸಕ್ಕರೆ

ಕಾರ್ಖಾನೆಯ ನಿರ್ದೇಶಕರಾಗಿ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಶಾಸಕರಾಗಿ ಹಾಗೂ ಅತ್ಯಂತ ಒಳ್ಳೆಯ ಸ್ವಭಾವದ ವ್ಯಕ್ತಿಯಾಗಿ, ಆ ಭಾಗದ ಜನರಿಗೆ ಯಾವುದೇ ಸಮಸ್ಯೆ ಬರದಂತಹ ಸಂದರ್ಭದಲ್ಲಿ ನಾನು ಇದ್ದೇನೆ ಎನ್ನುವ ಧ್ವನಿಗೆ ಧ್ವನಿಯನ್ನು ಗೂಡಿಸಿ, ಅವರೆಲ್ಲರ ದುಃಖದಲ್ಲಿ ನಾನು ಇದ್ದೇನೆ ಎನ್ನುವ ಭಾವನೆಯನ್ನು ಮೂಡಿಸಿದಂತಹ ವ್ಯಕ್ತಿ ದಿವಂಗತ ಎನ್.ಎ. ಚನ್ನೇಗೌಡರಾಗಿದ್ದರು. ದಿವಂಗತರ ಕುಟುಬಂಸ್ಥರಿಗೆ ಹಾಗೂ ಅವರನ್ನು ನಂಬಿದಂತಹ ವ್ಯಕ್ತಿಗಳಿಗೆ ಅವರ ಅಗಲಿಕೆಯಿಂದಾಗಿ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತ ಕೊಡಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಅದೇ ರೀತಿಯಾಗಿ ಕರ್ನಾಟಕದ ಮೂರನೇ ರಾಷ್ಟ್ರ ಕವಿಗಳಾದ ಡಾ|| ಜಿ.ಎಸ್. ಶಿವರುದ್ರಪ್ಪನವರ ನಿಧನದಿಂದ ರಾಜ್ಯಕ್ಕೆ ಬಹಳಷ್ಟು ತುಂಬಲಾರದ ನಷ್ಟವಾಗಿದೆ. ಕನ್ನಡ ಸಾಹಿತ್ಯ ಲೋಕದ ರತ್ನ ಹಾಗೂ ಕನ್ನಡ ಸಾಂಸ್ಕೃತಿಕ ಲೋಕದ ರಾಯಭಾರಿಯಾಗಿದ್ದರು. ದಿವಂಗತ ಡಾ|| ಜಿ.ಎಸ್. ಶಿವರುದ್ರಪ್ಪನವರು ಅತ್ಯಂತ ಮೃದು ಸ್ವಭಾವದ ವ್ಯಕ್ತಿಯಾಗಿದ್ದರು. ಭಾವಗೀತೆಗಳ ಲೋಕಕ್ಕೆ ಅವರ ಕೊಡುಗೆ ಅಪಾರವಾಗಿತ್ತು. ಕನ್ನಡದ ಭಾವಗೀತೆಗಳು ಇರುವಷ್ಟು ಕಾಲದವರೆಗೂ ಸಹ ರಾಷ್ಟ್ರ ಕವಿ ಡಾ|| ಜಿ.ಎಸ್. ಶಿವರುದ್ರಪ್ಪನವರ ಹೆಸರು ಶಾಶ್ವತವಾಗಿ ಉಳಿಯುತ್ತದೆ. ರಾಷ್ಟ್ರಕವಿ ಕುವೆಂಪುರವರ ಶಿಷ್ಯನಾಗಿ, ಗುರುವಿಗೆ ತಕ್ಕ ಶಿಷ್ಯನಾಗಿ ಸಾವಿರಾರು ಭಾವಗೀತೆಗಳ ಮೂಲಕ ನಮ್ಮೆಲ್ಲರ ಮನಸ್ಸಿನಲ್ಲಿ ಹಚ್ಚಹಸಿರಾಗಿ ಉಳಿದಿದ್ದಾರೆ. ಸುಗಮ ಸಂಗೀತ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ "ಎದೆ ತುಂಬಿ ಹಾಡುವೆನು" ಎಂಬ ಹಾಡಿನ ಮೂಲಕ ಭಾವಗೀತೆಗಳಲ್ಲಿ ಅವರ ಹೆಸರು ಮೌಂಟ್ ಎವರೆಸ್ಟ್ ಏರಿದೆ. "ಕಾಣದ ಕಡಲಿಗೆ ಹಂಬಲಿಸಿದೆ ಮನ" ಎಂಬ ಹಾಡಿನ ಮೂಲಕ ಮರೆಯಲಾಗದ ದಿಗ್ಗಜ ಡಾ|| ಜಿ.ಎಸ್. ಶಿವರುದ್ರಪ್ಪನವರು. ಅವರ ನಿಧನದಿಂದ ಬಹಳಷ್ಟು ನೋವಾಗಿದೆ. ಅವರ ಕುಟುಂಬವರ್ಗದವರಿಗೆ, ಅವರ ಭಾವಗೀತೆ ಲೋಕದ ಅಭಿಮಾನಿಗಳಿಗೆ ಹಾಗೂ ಅವರ ಶಿಷ್ಯರಿಗೆ ದು:ಖವನ್ನು

ಭರಿಸುವಂತಹ ಶಕ್ತಿಯನ್ನು ಆ ಭಗವಂತ ನೀಡಲಿ ಎಂದು ದೇವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

ದಿವಂಗತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರು ಮೈಸೂರಿನ ಅರಸರಾಗಿದ್ದು, ಯದುವಂಶದ ಕಟ್ಟ ಕಡೆಯ ದೊರೆಯಾಗಿದ್ದರು. ಅವರ ಅಕಾಲಿಕ ನಿಧನದಿಂದ ನಮ್ಮೆಲ್ಲರಿಗೆ ಬಹಳಷ್ಟು ನೋವಾಗಿದೆ. ಯಜಮಾನ ಇಲ್ಲದಂತಹ ಮನೆ ನಮ್ಮ ಕನ್ನಡ ನಾಡಾಗಿದೆ. ರಾಜಮನೆತನದ ಅತ್ಯಂತ ಮೃದು ಸ್ವಭಾವದ ಸೌಮ್ಯ ಜೀವಿಯಾಗಿ, ತಮ್ಮ ಬಳಿಗೆ ಕಷ್ಟ ಎಂದು ಬಂದಂತಹ ಜನರಿಗೆ ಸ್ಪಂದಿಸಿ ಅವರ ಕಷ್ಟಗಳಿಗೆ ಸಹಾಯವನ್ನು ಮಾಡುವಂತಹ ಉದಾರ ಮನಸ್ಸು ಇದ್ದಂತಹ ವ್ಯಕ್ತಿ ದಿವಂಗತ ಒಡೆಯರ್‌ರವರಾಗಿದ್ದರು. ರಾಜಕೀಯ ರಂಗದಲ್ಲಿ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಕಷ್ಟು ಸೇವೆಯನ್ನು ಸಲ್ಲಿಸಿದಂತಹ ವ್ಯಕ್ತಿಯಾಗಿ, ವನ್ಯ ಜೀವಿಗಳ ಛಾಯಾಗ್ರಾಹಕರಾಗಿ ಹಾಗೂ ಹಲವಾರು ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದಂತಹ ವ್ಯಕ್ತಿಯಾಗಿದ್ದರು. ಇವತ್ತು ನಾನು ಒಂದು ಘಟನೆಯನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಒಮ್ಮೆ ಬಳ್ಳಾರಿ ಜಿಲ್ಲೆಯಲ್ಲಿ ದರೂಜಿ ಹತ್ತಿರ ಇರುವಂತಹ ಕರಡಿ ಧಾಮಕ್ಕೆ ಅವರು ಭೇಟಿ ಕೊಟ್ಟಂತಹ ಸಂದರ್ಭದಲ್ಲಿ, ಅವರ ಜೊತೆಯಲ್ಲಿ ನಾನು ಸ್ವಲ್ಪ ಸಮಯ ಮಾತನಾಡುವಂತಹ ಸಂದರ್ಭದಲ್ಲಿ, ಅವರಿಗೆ ಇರುವಂತಹ ಅನುಭವ, ಜನರ ಮೇಲೆ ಇರುವಂತಹ ಪ್ರೀತಿ ಹಾಗೂ ವಿಶ್ವಾಸವನ್ನು ನೋಡಿದ ಆ ಕ್ಷಣಗಳನ್ನು ನಾನು ಎಂದಿಗೂ ಮರೆಯುವುದಕ್ಕೆ ಸಾಧ್ಯವಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ಪ್ರವಾಸೋದ್ಯಮ ಮಂತ್ರಿಯಾಗಿದ್ದ ಸಂದರ್ಭದಲ್ಲಿ, ಮೈಸೂರು ಅರಮನೆಗೆ ಭೇಟಿ ನೀಡಿ, ಅಲ್ಲಿ Sound and Light inauguration ಮಾಡುವಂತಹ ಸಂದರ್ಭದಲ್ಲಿ ಒಂದು ಗಂಟೆಗಳ ಕಾಲ ಮಹಾರಾಜರ ಹತ್ತಿರ ಸುದೀರ್ಘವಾಗಿ ಮಾತನಾಡುವಂತಹ ಸಂದರ್ಭದಲ್ಲಿ Sound and Light system ಬಹಳ ವರ್ಷಗಳಿಂದ ನಿಂತು ಹೋಗಿದ್ದು, ಅದನ್ನು ಮಹಾರಾಜರ ಜೊತೆಯಲ್ಲಿ inauguration ಮಾಡುವಂತಹ ಕೀರ್ತಿ ಸಹ ನನಗೆ ಸಿಕ್ಕಿತು. ಆ ಒಂದು ಪ್ರಸಂಗವನ್ನು ಇವತ್ತಿಗೂ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಶ್ರೀಕಂಠದತ್ತ ಒಡೆಯರ್ ನಿಧನದಿಂದ ನಮಗೆಲ್ಲರಿಗೂ, ಕರ್ನಾಟಕ ರಾಜ್ಯಕ್ಕೂ ತುಂಬಲಾರದ ನಷ್ಟವಾಗಿದ್ದು, ಆ ದು:ಖವನ್ನು ಭರಿಸುವ ಶಕ್ತಿಯನ್ನು ಆ ತಾಯಿ ಚಾಮುಂಡೇಶ್ವರಿ ಹಾಗೂ ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಡಾ|| ಅಕ್ಕಿನೇನಿ ನಾಗೇಶ್ವರ್ ರಾವ್ ಅವರು ತೆಲಗು ಚಿತ್ರರಂಗದ ಒಬ್ಬ ದಿಗ್ಗಜ ನಾಯಕರು. ಇವರ ನಿಧನದಿಂದ ಕೇವಲ ತೆಲಗು ಚಿತ್ರರಂಗವೇ ಅಲ್ಲದೇ ಇಡೀ ಭಾರತೀಯ ಚಲನಚಿತ್ರ ರಂಗವೇ ಒಬ್ಬ ಒಳ್ಳೆಯ ಕಲಾವಿದನನ್ನು ಕಳೆದುಕೊಂಡಿರುವ ನಷ್ಟವಾಗಿದೆ. ತೆಲಗು ಚಿತ್ರರಂಗದಲ್ಲಿ ಎರಡು ಕಣ್ಣುಗಳೆಂದರೆ ಡಾ|| ಅಕ್ಕಿನೇನಿ ನಾಗೇಶ್ವರರಾವ್ ಹಾಗೂ ಶ್ರೀ ಎನ್.ಟಿ. ರಾಮ್‌ರಾಮ್ ಅವರು. ಅವರಿಬ್ಬರೂ ಮಹಾನ್ ಕಲಾವಿದರಾಗಿ ಭಾರತೀಯ ಚಲನಚಿತ್ರರಂಗಕ್ಕೆ ದೊಡ್ಡ ಹೆಸರನ್ನು ತಂದು ಕೊಟ್ಟಿದ್ದಾರೆ. ಡಾ|| ಅಕ್ಕಿನೇನಿ ನಾಗೇಶ್ವರ್‌ರಾವ್ ಅವರು ಇಂದು ನಮ್ಮನ್ನೇನೂ ಅಗಲಿದ್ದಾರೆ, ಇದರಿಂದ ಇಡೀ ಭಾರತ ಚಲನಚಿತ್ರರಂಗ ಒಬ್ಬ ಒಳ್ಳೆಯ ಕಲಾವಿದನನ್ನು ಕಳೆದುಕೊಂಡಂತಾಗಿದೆ. 17ನೇ ವಯಸ್ಸಿನಲ್ಲಿ ತೆಲಗು ಚಿತ್ರರಂಗಕ್ಕೆ ಪ್ರವೇಶ ಮಾಡಿದಂತಹ ಇವರು ಏಳು ದಶಕಗಳ ಕಾಲ ಉತ್ತಮ ಸಾಧನೆಯನ್ನು ಮಾಡಿ ಇಡೀ ಚಿತ್ರರಂಗವೇ ಬೆಚ್ಚಿ ಬೀಳುವಂತೆ ಮಾಡಿದ್ದಾರೆ. ಇದು ನಮ್ಮೆಲ್ಲರ ಮಧ್ಯದಲ್ಲಿ ಇಲ್ಲ. ಇಡೀ ಚಿತ್ರರಂಗಕ್ಕೆ ಮತ್ತು ಅವರ ಅಭಿಮಾನಿ ಬಳಗದವರಿಗೆ ನಿಧನದ ನೋವನ್ನು ಭರಿಸುವಂತಹ ಶಕ್ತಿ ತೆಲುಗು ನಲ್ಲಿ ನೀಡಲಿ ಎಂದು ಪ್ರಾರ್ಥಿಸುತ್ತಾ ನನಗೆ ಮಾತನಾಡಿದ್ದಕ್ಕೆ ಅವಕಾಶ ನೀಡಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ಸದನದ ಮುಖಾಂತರ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):- ಮಾನ್ಯ ಸಭಾಧ್ಯಕ್ಷರೆ, ಸಮಾಜದಲ್ಲಿ ಬಹಳ ದೊಡ್ಡ ಸಾಧನೆಯನ್ನು ಮಾಡಿದ ಆರು ಜನರನ್ನು ನಾವು ಕಳೆದುಕೊಂಡಿದ್ದೇವೆ. ಅದಕ್ಕಾಗಿ ತಾವು ಸಂತಾಪಸಭೆಯನ್ನು ತಮ್ಮ ನೇತೃತ್ವದಲ್ಲಿ ದು:ಖವನ್ನು ವ್ಯಕ್ತ ಪಡಿಸುವುದಕ್ಕೆ ಎಲ್ಲರಿಗೂ ಕರೆದಿದ್ದೀರಿ. ಆದರೆ ಕೇವಲ ಸಂತಾಪ ವ್ಯಕ್ತಪಡಿಸಿದರೆ ಆಗುವುದಿಲ್ಲ, ಅವರುಗಳ ಸಾಧನೆಗಳನ್ನು

ಅವಲೋಕನೆಮಾಡಿ, ಕನಿಷ್ಠ ಅದನ್ನು ಆಚರಣೆ ಮಾಡಲು ಆಲೋಚನೆ ಮಾಡತಕ್ಕಂತಹ ಜ್ಞಾನ ಸರ್ಕಾರಗಳಿಗೆ ಬರಬೇಕು. ಮೊದಲನೆಯದಾಗಿ ಭೂಮಿ ಜ್ಞಾನ, ಆ ಒಂದು ಸತ್ಯಾಗ್ರಹದಲ್ಲಿ ತಾವೂ ಸಹ ಭಾಗವಹಿಸಿದ್ದಿರಿ. ಕಾಗೋಡು ಸತ್ಯಾಗ್ರಹ, ಉಳುವವನೇ ಭೂಮಿಯ ಒಡೆಯ. ಭೂಮಿಯ ಬಗ್ಗೆ ಪಾವಿತ್ರ್ಯ ಭಾವನೆಯಿದ್ದು ಹೋರಾಟ ಮಾಡಿದ್ದವರು ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು. ಇವತ್ತು ಭೂಮಿ ಜ್ಞಾನ ಏನಾಗಿದೆ ಎಂಬ ಬಗ್ಗೆ ಇಂದು ಎಲ್ಲರೂ ಆಲೋಚನೆ ಮಾಡಬೇಕಾಗುತ್ತದೆ. ಆವತ್ತಿನ ಭೂಮಿಯ ಪಾವಿತ್ರ್ಯತೆ ಇವತ್ತಿನ ಭೂಮಿಯನ್ನು ಜಾಗತೀಕರಣವಾದ ಮೇಲೆ ವಿದೇಶಿ ಕಂಪನಿಗಳಿಗೆ ಮಾರುವಂತಹ ಕೆಲಸಕ್ಕೂ, ಒಕ್ಕಲೆಬ್ಬಿಸುವ ಕೆಲಸಕ್ಕೂ ಎಷ್ಟು ವ್ಯತ್ಯಾಸವಿದೆ. ಭೂಮಿಯನ್ನು ಗೌರವಿಸುವ ಮನಸ್ಸಿದ್ದರೆ, ಭೂಮಿಯ ಮೇಲೆ ಸರಿಯಾದ ಭಾವನೆ ಇದ್ದರೆ ಆತ್ಮಕ್ಕೆ ಶಾಂತಿ ಕೋರುವುದಕ್ಕೆ ಈ ಸದನಕ್ಕೆ ಅರ್ಹತೆ ಇದೆ. ಸುಮ್ಮನೆ ನಾಮಾಕವಸ್ಥೆಗೆ ಅವರ ಆತ್ಮಕ್ಕೆ ಶಾಂತಿ ಕೋರುವ ಕೆಲಸವಾಗುತ್ತದೆ. ಸಮಾಜವಾದಿ ಹಾಗೂ ರೈತ ಸಂಘದ ವತಿಯಿಂದ ಗೆದ್ದು ಬಂದಿದ್ದಾರೆಂದರೆ ಅದು ಒಂದು ರೀತಿಯಲ್ಲಿ ಪವಾಡವೇ ಆಗಿದೆ. ಹುಡುಗಾಟ ಅಲ್ಲ, ರೈತರ ಹೆಸರಿನಲ್ಲಿ ರಾಜಕಾರಣ ಮಾಡುವುದು ಸುಲಭವಲ್ಲ. ಅಂದಿನ ಕಾಲದಲ್ಲಿಯೇ ಅವರು ಪವಾಡ ಮಾಡಿದ್ದಾರೆಂದರೆ ಅದು ಒಂದು ದೊಡ್ಡ ಸಾಧನೆಯೇ ಆಗಿದೆ. ಎರಡನೇಯವರು ಶ್ರೀ ಎನ್.ಎ. ಚನ್ನೇಗೌಡರು, ನಮ್ಮ ಕ್ಷೇತ್ರಕ್ಕೆ ಸೇರಿದವರಾಗಿದ್ದಾರೆ. ಎಂ.ಎ.ಎಕಾನಾಮಿಕ್ಸ್ ಓದಿದ್ದು, ನಾನು ಕಂಡ ಹಾಗೆ ಸುಮಾರು 35 ವರ್ಷಗಳ ಕಾಲ ಬಹಳ ಸರಳ ಜೀವಿ ಹಾಗೂ ಪ್ರಾಮಾಣಿಕತೆಯನ್ನು ಹೊಂದಿದ ವ್ಯಕ್ತಿಯಾಗಿದ್ದರು. ಪಾಂಡವಪುರ ಸಹಕಾರ ಕಾರ್ಖಾನೆಯ ನಿರ್ದೇಶಕರಾಗಿ ಬಹಳ ಪವಿತ್ರವಾದ ಕೆಲಸ ಮಾಡಿದ್ದರು. ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ಪ್ರಾಮಾಣಿಕವಾದ ವ್ಯಕ್ತಿ ಎಂದು ಹೆಸರನ್ನು ಗಳಿಸಿದ್ದರು. ಅವರು ಸುಮಾರು 40 ವರ್ಷಗಳ ಕಾಲ ಸೈಕಲ್‌ನಲ್ಲಿ ಗುದ್ದಲಿಯನ್ನು ಇಟ್ಟುಕೊಂಡು ತಿರುಗಾಡುತ್ತಿದ್ದರು ಬೆಳಿಗ್ಗೆ 6 ಗಂಟೆಗೆ ಗದ್ದೆಯ ಕೆಲಸಕ್ಕೆ ಬಂದರೆ ಸಂಜೆ 6 ಗಂಟೆಯವರೆಗೂ ಕಲಸ ಮಾಡುತ್ತಿದ್ದರು. M.A.

Economics ಓದಿದ್ದ ಇವರು ಮಹಾನ್ ಚಿಂತಕರಾಗಿದ್ದರು. ಇವರ ನಿಧನದಿಂದ ತುಂಬಲಾದಂತಹ ನಷ್ಟವಾಗಿದೆ.

ಶ್ರೀ ಶ್ರೀಕಂಠದತ್ತ ಒಡೆಯರ್ ಮಹಾರಾಜ ವಂಶದ ದೊಡ್ಡಕುಡಿ, ಕ್ರೀಡಾ ಪಟು, ಶಾಂತಿ ಮತ್ತು ಸಂಯಮದಿಂದ ಕೂಡಿದಂತಹ ವ್ಯಕ್ತಿಯಾಗಿದ್ದರು. ಇವರ ಮೀಸಲಾತಿ ಕೊಡುಗೆ ರಾಷ್ಟ್ರದಲ್ಲಿ ಅತ್ಯಂತ ದೊಡ್ಡ ಕೊಡುಗೆಯಾಗಿದೆ. ಮಿಲ್ಲರ್ ಕಮೀಷನ್ ಮಾಡಿ ಮೀಸಲಾತಿಯನ್ನು, ಸಮಾಜದಲ್ಲಿ ಜಾತಿಯಿಂದ ಅಸ್ಪೃಶ್ಯತೆಯಿಂದ ನೋವನ್ನು ಅನುಭವಿಸಿದ ವರ್ಗದ ಜನರಿಗೆ ಮೀಸಲಾತಿಯ ಆಶಾಕಿರಣವನ್ನು ಸೃಷ್ಟಿ ಮಾಡಿ, ಕನ್ನಂಬಾಡಿ ಕಟ್ಟೆಯನ್ನು 21 ನೇ ವರ್ಷದಲ್ಲಿಯೇ ಕಟ್ಟಿ, ಬಹಳ ದೊಡ್ಡ ಸಾಧನೆಯನ್ನು ಮಾಡಿದಂತಹ ಮಹಾರಾಜರ ವಂಶದ ಕುಡಿಯಾಗಿದ್ದರು. ಇವರ ಸಾವಿನಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದರೆಂದರೆ, ಅವರ ವಂಶದ ಬಗ್ಗೆ ಇಟ್ಟಂತಹ ಗೌರವ ಕಾಣಿಸುತ್ತದೆ. ಕ್ರೀಡಾ ರಂಗದಲ್ಲಿ, ಕ್ರಿಕೆಟ್ಟಿನಲ್ಲಿ ಅವರ ಪಾತ್ರ ಬಹಳ ಪ್ರಮುಖವಾಗಿತ್ತು. ನಾನೂ ಸಹ ಅವರ ಹತ್ತಿರ ಎರಡು-ಮೂರು ಸಾರಿ ಮಾತನಾಡಿದಾಗ, ಅವರು ಬಹಳ ಸಂಯಮದಿಂದ ಹಾಗೂ ಸೌಹಾರ್ದತೆಯಿಂದ ಮಾತನಾಡಿದ್ದರು.

ಸಾಹಿತ್ಯ ಕ್ಷೇತ್ರದ ದಿಗ್ಗಜರಾದ ಡಾ|| ಜಿ.ಎಸ್. ಶಿವರುದ್ರಪ್ಪನವರು ನೀಡಿರುವ ಕೊಡುಗೆ ಬಹಳ ದೊಡ್ಡದು. ಬಹಳ ಒಳ್ಳೆಯ ಚಿಂತಕರಾಗಿದ್ದರು. ವಿಶೇಷವಾಗಿ ಅವರ ಸಾವಿನ ಸಮಯದಲ್ಲಿ ಒಂದು ವಿಲ್‌ನ್ನು ಬರೆದಿದ್ದರು. ಯಾವುದೇ ಧರ್ಮಗಳ ವಿಧಿವಿಧಾನವನ್ನು ನನ್ನ ಶವ ಸಂಸ್ಕಾರಕ್ಕೆ ಮಾಡಬೇಡಿ, ಮಾನವ ಧರ್ಮದ ವಿಧಿವಿಧಾನದ ಮೂಲಕ ನನ್ನ ಶವ ಸಂಸ್ಕಾರವಾಗಬೇಕು. ನಾನು ಯಾವುದೇ ಜಾತಿ, ಧರ್ಮಕ್ಕೆ ಸೇರಿದವನಲ್ಲ, ನಾನೊಬ್ಬ ವಿಷ ಸಮಾಜದಿಂದ ಹೊರಬಂದಂತಹ 'ವಿಶ್ವ ಮಾನವ' ಎಂದು ಸಾವಿನ ಕಾಲದಲ್ಲಿ ಒಂದು ವಿಲ್‌ನ್ನು ಬರೆದು, ಮಾನವ ಧರ್ಮವನ್ನು ಎತ್ತಿ ಹಿಡಿದಂತಹ ಕೀರ್ತಿ ಅವರದ್ದು. ಸಾವಿನ ಸಮಯದಲ್ಲಿ ಬರೆದಂತಹ ವಿಲ್ ಶ್ಲಾಘನೀಯವಾದ ವಿಚಾರ. ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿದಂತಹ ಕೊಡುಗೆಯನ್ನು ಮಾನ್ಯ ಸದಸ್ಯರಾದ ಶ್ರೀ ವೈ.ಎಸ್.ವಿ. ದತ್ತ ಅವರು ಬಹಳ

ಚೆನ್ನಾಗಿ ವಿಶ್ಲೇಷಣೆ ಮಾಡಿ ಹೇಳಿದರು. ಅವರ ಅಗಲಿಕೆಯಿಂದ ಬಹಳಷ್ಟು ದುಃಖ ಪಡುತ್ತಿದ್ದೇವೆ. ಅವರ ಸಾಹಿತ್ಯದ ಜ್ಞಾನವನ್ನು ಇವತ್ತಿನ ವಿಶ್ವವಿದ್ಯಾನಿಲಯದ ಯುವಕರುಗಳಿಗೆ ತಲುಪಿಸುವಂತಹ ಕೆಲಸ ಮಾಡಬೇಕು. ಅದರಲ್ಲಿಯೂ ರಾಷ್ಟ್ರಕವಿ ಕುವೆಂಪುರವರ ಅಜ್ಞಾನ, ಮೌಢ್ಯತೆ ಮತ್ತು ವಿಶ್ವಮಾನವ ಧರ್ಮವನ್ನು ಅವರ ಶಿಷ್ಯನಾಗಿ ಸ್ವೀಕರಿಸಿದವರು. ಇದು ಕುವೆಂಪು ಅವರ ಆತ್ಮಕ್ಕೆ ಸಿಕ್ಕಂತಹ ಶಾಂತಿ ಮತ್ತು ಅವರ ವಿಚಾರವನ್ನು ಗೌರವಿಸಿದವರು.

ಡಾ॥ ಅಕ್ಕಿನೇನಿ ನಾಗೇಶ್ವರ್ ರಾವ್ ಅವರು ಒಬ್ಬ ಕಲಾವಿದ ಅಲ್ಲ. ಸಾಂಸಾರಿಕ ಚಿತ್ರಗಳನ್ನು ತೆರೆಯ ಮೇಲೆ ತರುವುದರ ಮೂಲಕ ಸಮಾಜದ ಸಂಸ್ಕೃತಿಯನ್ನು ರೂಪಿಸಿದಂತಹ ವ್ಯಕ್ತಿ ಇವರು. ಇವತ್ತಿನ ಮತ್ತು ಅವತ್ತಿನ ಚಿತ್ರಕ್ಕೂ ಬಹಳ ಅಗಾಧವಾದ ವ್ಯತ್ಯಾಸವಿದೆ. ಗಂಡ–ಹೆಂಡತಿ, ಮಕ್ಕಳು ಎರಡು ಸಾರಿ ಹೋಗಿ ಚಿತ್ರವನ್ನು ವೀಕ್ಷಣೆ ಮಾಡಬಹುದೆಂಬ ಭಾವನೆಯನ್ನು ಸೃಷ್ಟಿ ಮಾಡಿದಂತಹ, ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ವಿಚಾರದಲ್ಲಿ ಸಾಧನೆ ಮಾಡಿದಂತಹ ಬಹಳ ದೊಡ್ಡ ಕಲಾವಿದ. ಸಾವು ಯಾರನ್ನೂ ಬಿಡುವುದಿಲ್ಲ. ಇವತ್ತಿನ ಕಲೆಗೂ ಅವತ್ತಿನ ಕಲೆಗೂ ಬಹಳ ವ್ಯತ್ಯಾಸವಿದೆ. ಇವರ ಅಗಲಿಕೆಯಿಂದ ಬಹಳ ನೋವುಂಟಾಗಿದೆ.

ಶ್ರೀ ಯಶವಂತ ಹಳಬಂಡಿ ಅವರು ಸಂಗೀತ ಕ್ಷೇತ್ರದಲ್ಲಿ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಇಂತಹವರ ಅಗಲಿಕೆಯಿಂದ ತುಂಬಲಾರದ ನಷ್ಟವುಂಟಾಗಿದೆ. ಆರು ಜನ ಪ್ರಮುಖರಿಗೆ ಶಾಂತಿಯನ್ನು ಕೋರುತ್ತಾ, ಈ ಸಾಂತ್ವನ ವಂದನಾನಿರ್ಣಯಕ್ಕೆ ಬೆಂಬಲಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು):– ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ತಾವು ಮಂಡಿಸಿರತಕ್ಕಂತಹ ಸಂತಾಪಸೂಚಕ ನಿರ್ಣಯದಲ್ಲಿ ರಾಜಕೀಯ, ಸಾಹಿತ್ಯ, ಸಂಗೀತ ಮತ್ತು ಚಲನಚಿತ್ರ ಕ್ಷೇತ್ರದಲ್ಲಿ ಅಗಲಿದ ಎಲ್ಲಾ ಗಣ್ಯರಿಗೂ ಸಂತಾಪಸೂಚನೆಯನ್ನು ಮಂಡಿಸಿದ್ದೀರಿ.

ಈಗಾಗಲೇ ಸಂತಾಪ ಸೂಚನಾ ನಿರ್ಣಯದ ಮೇಲೆ ಮಾನ್ಯ ಮುಖ್ಯಮಂತ್ರಿಗಳಾದ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಮಾನ್ಯ ಸದಸ್ಯರುಗಳು ಮಾತನಾಡಿ, ತಮ್ಮ ಭಾವನಾತ್ಮಕವಾದ ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ಶ್ರೀ ಮುಲ್ಕಾ ಗೋವಿಂದ ರೆಡ್ಡಿ ಅವರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಅವರು ಮಾತನಾಡುತ್ತಾ ಹೇಳಿದ್ದಾರೆ. ಮೂಲತ: ಸಮಾಜವಾದಿ ಚಿಂತಕರಾಗಿದ್ದವರು, ಅವತ್ತಿನ ಸಮಾಜವಾದಿ ಚಿಂತನೆಗಳು, ಹೋರಾಟ ಬಹಳ ಕಷ್ಟಕರವಾಗಿರುವಂತಹದ್ದು. ಅದರಲ್ಲೂ ಕಾಗೋಡು ಸತ್ಯಾಗ್ರಹ ಗೇಣಿದಾರರ ಬಗ್ಗೆ ಐತಿಹಾಸಿಕವಾದಂಥ ಚಳುವಳಿ. ಸ್ವತಃ ಸಮಾಜವಾದಿ ಚಿಂತಕರಾಗಿದಂಥ ಡಾ|| ರಾಮ್ ಮನೋಹರ್ ಲೋಹಿಯಾರವರು ಭಾಗವಹಿಸಿದಂಥ ಒಂದು ಐತಿಹಾಸಿಕವಾದಂಥ ಚಳುವಳಿಯಲ್ಲಿ ಕೂಡ ಅವರು ಭಾಗವಹಿಸಿದ್ದರು. ನಮ್ಮಲ್ಲಿ ಸಂವಿಧಾನ ಆಚರಣೆ ಬಂದ ಮೇಲೆ ನಡೆದ ಮೊದಲ ಚುನಾವಣೆ 1952 ರಲ್ಲಿ. ಅದಕ್ಕೂ ಮೊದಲೇ 1945 ರಲ್ಲಿ ಅವರು ವಿಧಾನಪರಿಷತ್ತಿಗೆ ಆಯ್ಕೆ ಆಗಿದ್ದವರು. 1957ರ ಮೊಟ್ಟಮೊದಲ ಚುನಾವಣೆಯಲ್ಲಿ ಆಯ್ಕೆಯಾದವರಲ್ಲಿ ಮುಲ್ಕಾ ಗೋವಿಂದ ರೆಡ್ಡಿಯವರು ಒಬ್ಬರು. ಈ ಸಂದರ್ಭದಲ್ಲಿ ಅವರನ್ನು ಸನ್ಮಾನ ಕೂಡ ಮಾಡಿದ್ದೇವೆ. 1958 ರಿಂದ 1982 ವರೆಗೆ ಆವರು ನಾಲ್ಕು ಬಾರಿ ರಾಜ್ಯಸಭಾ ಸದಸ್ಯರಾಗಿದ್ದರು. ನೂರು ಅಧಿವೇಶನಗಳಲ್ಲಿ ಭಾಗವಹಿಸಿದ್ದರು. ದಕ್ಷಿಣ ಭಾರತದಿಂದ ನೂರು ರಾಜ್ಯಸಭೆ ಅಧಿವೇಶನಗಳಲ್ಲಿ ಭಾಗವಹಿಸಿದ್ದವರ ಪೈಕಿ ಮುಲ್ಕಾ ಗೋವಿಂದ ರೆಡ್ಡಿ ಅವರು ಒಬ್ಬರು ಎಂದು ಅವರಿಗೆ ಸನ್ಮಾನ ಕೂಡ ಮಾಡಲಾಗಿತ್ತು. ಇದು ಕರ್ನಾಟಕ ರಾಜ್ಯದ ನಮ್ಮೆಲ್ಲರಿಗೆ ಹೆಗ್ಗಳಿಕೆಯಾದಂಥ ವಿಚಾರ. ನನಗೆ ಬಹಳ ಸಂತೋಷವಾದ ವಿಚಾರವೆಂದರೆ, 1980ರಲ್ಲಿ ನಾನು ಲೋಕಸಭೆಗೆ ಆಯ್ಕೆಯಾದಾಗ ಅವರನ್ನು ಬಹಳ ಹತ್ತಿರದಿಂದ ಅವರನ್ನು ನೋಡುವ, ಮಾತನಾಡುವ ಹಾಗೂ ಅವರ ಅನುಭವವನ್ನು ಹಂಚಿಕೊಳ್ಳುವ ಅವಕಾಶ ನನಗೆ ಸಿಕ್ಕಿತು. ಅವರು ಹಿರಿಯ ಸಮಾಜವಾದಿ ಚಿಂತಕರು, ರೈತರ ಬಗ್ಗೆ ಹೋರಾಟ ಮಾಡಿದಂಥವರು ಹಾಗೂ ಶೋಷಿತರ ಬಗ್ಗೆ ಚಿಂತನೆ

ಮಾಡಿದಂಥವರಾಗಿದ್ದಾರೆ. ಅವರು ನಮ್ಮನ್ನು ಅಗಲಿದ್ದಾರೆ. ಅವರದ್ದು ತುಂಬು ಜೀವನವಾಗಿತ್ತು. 97 ವರ್ಷವಾಗಿತ್ತು, ಶತಾಯುಷಿಗಳಾಗಬೇಕಾಗಿತ್ತು. ಇವರದ್ದು ಸಾರ್ಥಕವಾದ ಬದುಕು, ಹೋರಾಟದ ಬದುಕು ಆಗಿತ್ತು. ಈ ಸಂದರ್ಭದಲ್ಲಿ ಸದನದಲ್ಲಿ ಅವರನ್ನು ನೆನಪಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಮಾನ್ಯ ಪುಟ್ಟಣ್ಣಯ್ಯನವರು ಪಾಂಡವಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಬಹುಶಃ ಅಲ್ಲಿಂದ ಒಂದು ಬಾರಿ ದಿವಂಗತ ಎನ್.ಎ. ಚನ್ನೇಗೌಡರವರು ಆಯ್ಕೆಯಾಗಿದ್ದರು. ಎಂ.ಎ.ಅರ್ಥಶಾಸ್ತ್ರವನ್ನು ಓದಿದ ಅವರು ಅದರಲ್ಲೂ ವಿಶೇಷವಾಗಿ ರೈತರ ಬಗ್ಗೆ ಚಿಂತನೆ ಮಾಡಿದಂಥವರು. ಅರ್ಥಶಾಸ್ತ್ರದ ಹಿನ್ನಲೆಯಲ್ಲಿ ಚಿಂತನೆ ಮಾಡಿದವರು. 35 ವರ್ಷಗಳ ಕಾಲ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿದ್ದರು. ಅಂಥ ಹಿನ್ನಲೆಯಿರತಕ್ಕಂಥ ಆ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಿತಿಗತಿ ಏನಾಗಿದೆ ಎಂದು ನೋಡಿದರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಬಹುಶ: ಇಂಡಿಯಾ ದೇಶದಲ್ಲಿ ಅಂಥ ಸಕ್ಕರೆ ಕಾರ್ಖಾನೆ ಇಲ್ಲ. ಆ ಸಕ್ಕರೆ ಕಾರ್ಖನೆಗೆ ಬೇಕಾದಂಥ ಕಬ್ಬನ್ನು ಒದಗಿಸುವಂಥ ಪ್ರದೇಶವನ್ನು ನಾನು ಸಕ್ಕರೆ ಕಾರ್ಖಾನೆ ಮಂತ್ರಿಯಾಗಿದ್ದಾಗ ಹಲವಾರು ಬಾರಿ ನೋಡಿದ್ದೇನೆ. ಪಾಂಡವಪುರವು ಜಿಲ್ಲಾ ಕಾರ್ಖಾನೆಯಾಗಿದೆ ಇವತ್ತು ಮಾನ್ಯ ಪುಟ್ಟಣ್ಣಯ್ಯನವರು ರೈತರ ಸಂಘದ ಹೋರಾಟಗಾರರ ಸದಸ್ಯರಾಗಿದ್ದಾರೆ. ತಾವು ಹೇಳಿದ ಹಾಗೆ ನಿಜವಾದಂಥ ರೀತಿಯಲ್ಲಿ ಚಿಂತನೆ ಮಾಡಿ ಸಾರ್ಥಕರಾಗಬೇಕಾದರೆ ಅವರಿಗೆ ಏನಾದರೂ ಕೊಡುಗೆಯನ್ನು ಕೊಡಬೇಕಾಗುತ್ತದೆ. ಅವರ ಆದರ್ಶ, ವ್ಯಕ್ತಿತ್ವ, ಸಾಧನೆಗಳು ಸಾರ್ಥಕವಾಗುವ ರೀತಿಯಲ್ಲಿ ನಾವು ಪ್ರಯತ್ನವನ್ನು ಮಾಡಬೇಕು. ಹಾಗಾಗಿ ಮಾನ್ಯ ಪುಟ್ಟಣ್ಣಯ್ಯನವರಿಗೆ ಹೇಳುವಂಥದ್ದು, 35 ವರ್ಷಗಳ ಕಾಲ ಇಂಥ ಒಂದು ಸಹಕಾರ ಸಕ್ಕರೆ ಕಾರ್ಖಾನೆಯನ್ನು ಕಟ್ಟಿರತಕ್ಕಂಥ ದಿವಂಗತ ಎನ್.ಎ ಚನ್ನೇಗೌಡರವರಿಗೆ ನಿಜವಾಗಿಯೂ ಶ್ರದ್ಧಾಂಜಲಿ ಅರ್ಪಿಸುವುದು ಹಾಗೂ ಮತ್ತೆ ಅದನ್ನು ಪುನರುಜ್ಜೀವನಗೊಳಿಸಲು ನಾವೆಲ್ಲಾ ಸೇರಿ ಪ್ರಯತ್ನ ಮಾಡಿದರೆ ಅವರ ಅಗಲಿಕೆಯಿಂದ ಉಂಟಾಗಿರುವ ನೋವನ್ನು ಸರಿಪಡಿಸುವಂಥಹ ಪ್ರಯತ್ನವನ್ನು ಮಾಡಿದಂತೆ ಆಗುತ್ತದೆ.

ಇನ್ನೂ ವಿಶೇಷವಾಗಿ ದಿವಂಗತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರನ್ನು ನಾವು ಸ್ಮರಿಸಿಕೊಳ್ಳಬೇಕಾದರೆ ಯದುವಂಶದ ರಾಜರು, ಒಡೆಯರ್ ವಂಶಸ್ಥರನ್ನು, ಸದನದಲ್ಲಿ ಮಾತನಾಡಿದವರೆಲ್ಲರೂ ಕೂಡ ಜ್ಞಾಪಿಸಿಕೊಳ್ಳುತಿರುತ್ತೇವೆ. ಅವರಲ್ಲಿ ಮಾನ್ಯ ಚಾಮರಾಜ ಒಡೆಯರ್‌ರವರು ಇರಬಹುದು, ಮಾನ್ಯ ನರಸಿಂಹರಾಜ ಒಡೆಯರ್ ಇರಬಹುದು, ಮಾನ್ಯ ನಾಲ್ವಡಿ ಕೃಷ್ಣರಾಜ ಒಡೆಯರ್ ಇರಬಹುದು ಅವರನ್ನೆಲ್ಲಾರನ್ನೂ ನಾವು ಜ್ಞಾಪಿಸಿಕೊಳ್ಳುತ್ತಿರುತ್ತೇವೆ. ಅಂಥ ವಂಶದಲ್ಲಿ ದಿವಂಗತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಬಂದವರಾಗಿದ್ದಾರೆ. ಬಹುಶ: ನನಗೆ ತಿಳಿದಂತೆ, ರಾಜತ್ವದ ಕೊನೆಯನ್ನು ಅವರ ತಂದೆಯವರು ಅನುಭವಿಸಿದ್ದಾರೆ. ಮಾನ್ಯ ಜಯಚಾಮರಾಜೇಂದ್ರ ಒಡೆಯರ್ ರವರಿಗೆ ರಾಜತ್ವ ಇತ್ತು. ಇವರಿಗೆ ರಾಜತ್ವ ಇರಲಿಲ್ಲ. ಅದು ಇವರ ಕಾಲದಲ್ಲಿ ಕೊನೆಗೊಂಡಿತ್ತು. ಆಗ ನಾವು ರಾಜತ್ವವನ್ನು ತೆಗೆದುಹಾಕಿದ್ದೆವು. ರಾಜತ್ವ ಇದ್ದಾಗಲೂ ಕೂಡ ಒಡೆಯರ್‌ರವರನ್ನು ನೆನಪಿಸಿಕೊಳ್ಳುವಂಥದ್ದು, they are true democrats ಎಂದು. ಅತ್ಯಂತ ವಿಶೇಷವಾಗಿ ಪ್ರಜಾಪ್ರಭುತ್ವವಾದಿಯಾದಂಥ ಈ ದೇಶದಲ್ಲಿ, ಈ ರಾಷ್ಟ್ರದಲ್ಲಿ ನಾವು ನೋಡಿದಾಗ ಬ್ರಿಟಿಷರು ಬರುವುದಕ್ಕೆ ಮೊದಲೇ ರಾಜರು, ಮಹಾರಾಜರು, ಪಾಳೆಗಾರರು, ಸಾಮಂತರಾಗುತ್ತಿದ್ದ ದೇಶ. ಯಾರು ಬಲಿಷ್ಟರಾದಂಥ ಸಾಮಂಥರು, ರಾಜರು, ಪಾಳೆಗಾರರು, ತಮ್ಮ ಕೆಳಗಡೆ ಇರತಕ್ಕಂಥವರನ್ನು ಯುದ್ಧದಲ್ಲಿ ಸೋಲಿಸಿ ಅವರಿಂದ ಕಪ್ಪಕಾಣಿಕೆಗಳನ್ನು ಪಡೆದು ಅವರನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡು ತಮ್ಮ ಆಡಳಿತವನ್ನು ನಡೆಸುತ್ತಿದ್ದರು. ನಾವು ತಿಳಿದ ಮಟ್ಟಿಗೆ ಯಾರು ಅಂಥ ಪ್ರಜಾಪ್ರಭುತ್ವವಾದಿಗಳಾಗಿರಲಿಲ್ಲ. ಆದರೆ ನಮ್ಮ ಯದುವಂಶದ ಒಡೆಯರ್‌ರವರ ಹಿನ್ನಲೆಯನ್ನು ನೋಡಿದಾಗ ಅವರು ಅತ್ಯಂತ ಪ್ರಜಾಪ್ರಭುತ್ವವಾದಿಗಳಾಗಿದ್ದರು. ಪ್ರಜಾಪ್ರಭುತ್ವಕ್ಕೆ ಬೆಲೆಯನ್ನು ಕೊಡುವಂಥವರು ಆಗಿದ್ದರು. ಆಗಲೇ ಅವರು Democratic ಆಗಿ ಪ್ರಜಾಪ್ರಭುತ್ವದ ನೆಲೆಯಲ್ಲಿ C & DB ನಂಥ ಅನೇಕ ಸಂಸ್ಥೆಗಳನ್ನು ಅವರು ಅಸ್ತಿತ್ವಕ್ಕೆ ತಂದಿದ್ದಾರೆ. ಅವರು ಮೈಸೂರು ನಗರಕ್ಕೆ ಎಷ್ಟು ಸುಂದರವಾದ ಕೊಡುಗೆಯನ್ನು ಕೊಟ್ಟಿದ್ದಾರೆಂದು

ನಮ್ಮ ಮಾನ್ಯ ಜಗದೀಶ್ ಶೆಟ್ಟರವರು ಇವತ್ತು ಹೇಳುತ್ತಿದ್ದರು. Mysore is a well-planned and beautiful city. ಮೈಸೂರು ಅತ್ಯಂತ ಸಮಯೋಚಿತವಾದಂಥ, ಸುಂದರವಾದಂಥ ನಗರ. ಅಂತರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಣೆ ಮಾಡತಕ್ಕಂಥ ನಗರ. ಇವತ್ತು ಮೈಸೂರು ಭಾರತದಲ್ಲೇ ಅತ್ಯಂತ ಎರಡನೇ ಸುಂದರವಾದಂಥ ಒಂದು ಪ್ರವಾಸಿಗರ ಕೇಂದ್ರವಾಗಿದೆ. ಇದರ ಕೊಡುಗೆ ಅಪಾರ ರಾಜರು ಬಹಳ ಚಿಂತನೆಯನ್ನು ಮಾಡಿದ್ದಾರೆ. ಅಂಥ ಸುಂದರವಾದ ಮೈಸೂರು ನಗರವನ್ನು ನಾವು ಹೇಗೆ ಮುಂದುವರಿಸಿಕೊಂಡು ಹೋಗಬೇಕು ಎನ್ನುವುದರ ಬಗ್ಗೆ ಇವತ್ತು ನಾವು ಯೋಚನೆ ಮಾಡುತ್ತಿದ್ದೇವೆ. ಕುಡಿಯುವ ನೀರಿಗಾಗಲಿ, ರಸ್ತೆಗಾಗಲಿ, ಶಿಕ್ಷಣಕ್ಕಾಗಲಿ, ಕಛೇರಿಗಳಿಗಾಗಲಿ ಎಲ್ಲಾ ದೃಷ್ಟಿಯಿಂದ ಅಷ್ಟು ಯೋಜನೆಯನ್ನು ಮಾಡಿ ವ್ಯವಸ್ಥಿತವಾದಂಥ ರೀತಿಯಲ್ಲಿ ಮೈಸೂರು ನಗರವನ್ನು ಕಟ್ಟಿಕೊಂಡಿದ್ದಾರೆ. ಇವತ್ತಿನ ಸಮಯದಲ್ಲೂ ಕೂಡ ಆ ಸೌಂದರ್ಯಕ್ಕೆ ತಕ್ಕಂತೆ ಅದರ ಬೆಳವಣಿಗೆ ಆಗುವ ರೀತಿಯಲ್ಲಿ ನಾವು ಪ್ರಯತ್ನವನ್ನು ಮಾಡಬೇಕಾಗಿದೆ. ಆ ಮನೆತನದ ಹಿನ್ನಲೆಯಲ್ಲಿ ಬಂದಿರತಕ್ಕಂಥವರು ದಿವಂಗತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರಾಗಿದ್ದಾರೆ. ಅವರ ತಂದೆ ಕೊನೆಯ ರಾಜತ್ವವನ್ನು ಪಡೆದುಕೊಂಡಿದ್ದರು. ಆದರೆ ಸಂಪ್ರಾದಾಯಿಕವಾಗಿ ಇವರು ವಿಧಿವಿಧಾನಗಳನ್ನು ಅನುಸರಿಸುತ್ತಿದ್ದರು. ಖಾಸಗಿ ದರ್ಬಾರುಗಳಿದ್ದವು. ಪೂಜೆ ವಗ್ಯೆರೆ ಇತ್ಯಾದಿಗಳೆಲ್ಲಾ ಅಂದರೆ ಅರಮನೆಯಲ್ಲಿ ಏನೇನು ನಡೆಯಬೇಕು ಅವುಗಳನ್ನು ಸಂಪ್ರಾದಾಯಿಕವಾಗಿ ಇವರು ನಡೆಸಿಕೊಂಡು ಬರುತ್ತಿದ್ದರು. ವಿಶೇಷವೆಂದರೆ ನನಗೆ ಒಡೆಯರ್‌ರವರು ಬಹಳ ಆತ್ಮೀಯರಾಗಿದ್ದರು. ನಾನು ಮೈಸೂರಿನಲ್ಲಿ ಓದಿದ್ದು. ನಮ್ಮ ಮುಖ್ಯಮಂತ್ರಿಗಳು ಹೇಳಿದಂತೆ ಅವರು ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದರು. ಅವರಿಗೆ ಆ ಕಾಲೇಜಿನಲ್ಲಿ ಪ್ರತ್ಯೇಕವಾದಂಥ ಆಸನ ಕೊಡುವ ಪದ್ಧತಿ ಇತ್ತು. ಆದರೆ ಅದನ್ನು ಅವರು ನಿರಾಕರಿಸಿದರು. ಎಲ್ಲಾ ವಿದ್ಯಾರ್ಥಿಗಳ ಜೊತೆಯಲ್ಲಿ ಕುಳಿತುಕೊಳ್ಳುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳ ಜೊತೆ ಸೇರುತ್ತಿದ್ದರು. ಅವರು ಕ್ರಿಕೆಟ್ ಆಟವನ್ನು ಇಷ್ಟಪಡುತ್ತಿದ್ದರು. ಸ್ಕೇಟಿಂಗ ಕೂಡ ಆಡುತ್ತಿದ್ದರು. ಅವರ

ಜೊತೆಯಲ್ಲಿದ್ದ ಎಲ್ಲಾ ಸಹಪಾಠಿಗಳನ್ನು ಪ್ರೀತಿ ಮಾಡುತ್ತಿದ್ದು ಬಹಳ ವಿಶೇಷ. University ಅಥವಾ ಮಹಾರಾಜ ಕಾಲೇಜು ಟೀಮ್‌ಗೆ ಅವರು ಕ್ಯಾಪ್ಟನ್ ಕೂಡ ಆಗಿದ್ದರು. ವಿಶೇಷವೆಂದರೆ, ನಾನು ಮತ್ತು ಅವರು ಒಟ್ಟಿಗೆ ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದೆವು. ನಾನು ನಾಲ್ಕನೇ ಬಾರಿ ಆಯ್ಕೆಯಾದಾಗ ಅವರೇ ಬೇರೆ, ನಾನೇ ಬೇರೆ ಆಯ್ಕೆಯಾಗಿದ್ದೆವು. ಹೀಗೆ ಅತ್ಯಂತ ಆತ್ಮೀಯತೆ, ಒಡನಾಟವನ್ನು ಅವರು ಇಟ್ಟುಕೊಂಡಿದ್ದರು. ಬಹಳ ಸರಳತೆಯಿಂದ ಇದ್ದರು. ಎಲ್ಲಾರ ಜೊತೆ ಬೆರೆಯುತ್ತಿದ್ದರು. ರಾಜರ ವಿಷಯಕ್ಕೆ ಸಂಬಂಧಿಸಿದಂತೆ, ಆಸ್ತಿ ವಿವಾದ ಇತ್ತು. ಅದು ಬೇರೆ ವಿಚಾರ. ಅದರ ಜೊತೆಯಲ್ಲಿ ಅವರು ರಾಜಕೀಯಕ್ಕೆ ಬಹಳ ಇಷ್ಟಪಟ್ಟು ಬಂದವರಾಗಿದ್ದರು. ಜನರ ಜೊತೆ ಬೇರೆಯುವ ಒಬ್ಬ ಸ್ನೇಹಮಯಿಯಾಗಿದ್ದರು. ನಾನು ಈ ಬಾರಿ ಜಿಲ್ಲಾ ಮಂತ್ರಿಯಾಗಿದ್ದಾಗ ಸಾಂಪ್ರದಾಯಿಕವಾಗಿ ಮೈಸೂರು ದಸರಾಕ್ಕೆ ಅವರನ್ನು ಬೆಂಗಳೂರು ಅರಮನೆಯಲ್ಲಿ ಅಹ್ವಾನಿಸಲು ಹೋಗಿದ್ದೆ. ಬಹಳಷ್ಟು ಸಮಯ ಅವರ ಜೊತೆ ಕುಳಿತು ಚರ್ಚೆ ಮಾಡಿದ್ದೆ. ದಸರಾ ಸಮಯದಲ್ಲಿ ಅವರಿಗೆ ಆರೋಗ್ಯ ಸರಿಯಿರಲಿಲ್ಲ. ನಾನು ಹಾಗೂ ಮುಖ್ಯಮಂತ್ರಿಗಳು ಜೊತೆಯಲ್ಲಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆದುಕೊಂಡು ಬನ್ನಿ ದಸರಾವನ್ನು ವೀಕ್ಷಣೆ ಮಾಡೋಣವೆಂದು ಹೇಳಿದರು. ನಾನು ಅವರ ಬಳಿ ಹೋಗಿ ತಾವು ಜೊತೆಗೆ ಬನ್ನಿ, ತಾವು ರಾಜ ಮನೆತನವದವರಾಗಿದ್ದೀರಿ, ಜನರು ಸಹ ತುಂಬಾ ಇಷ್ಟಪಡುತ್ತಾರೆ. ಜೊತೆಗೆ ದಸರಾ ಮೆರವಣಿಗೆಗೆ ಕಳೆಯು ಸಹ ಬರುತ್ತದೆ. ಎಂದು ಆಹ್ವಾನಿಸಿದಾಗ ಆರೋಗ್ಯ ಸರಿಯಿಲ್ಲದಿದ್ದರೂ ಜೊತೆಯಲ್ಲೇ ದಸರಾ ವೀಕ್ಷಣೆಗೆ ಬಂದರು. ನಾನು ಅವರು ಕೊನೆಯಲ್ಲಿ ದಸರಾ ಮೆರವಣಿಗೆಯ ವೀಕ್ಷಣೆಯನ್ನು ಮಾಡಿದೆವು. ಅವರದ್ದು ಒಂದು ಅಕಾಲಿಕ ಮರಣ. 60 ವರ್ಷದಲ್ಲಿ ತೀರಿಕೊಂಡಿದ್ದು ನಮ್ಮೆಲ್ಲರಿಗೂ ಕೂಡ ದು:ಖವಾಗಿದೆ. ರಾಜ ಮನೆತನದ ಹಿನ್ನಲೆಯಲ್ಲಿ ಬಂದು ಸ್ನೇಹ ಸ್ವಾಭಾವದ, ಅತ್ಯಂತ ಸರಳ ವ್ಯಕ್ತಿಗಳಾಗಿದ್ದರು. Karnataka State Cricket Association ಗೆ ಅಧ್ಯಕ್ಷರಾಗಿದ್ದರು. ದುರಂತ ಅಂದರೆ, ಮೊದಲ ಸಲ ಆಯ್ಕೆಯಾದರು, ಎರಡನೇ ಸಲ ಸೋತರು. ಮೂರನೇ ಬಾರಿ ಬಹಳ

ಬಹುಮತದಿಂದ ಗೆದ್ದರು. KSCA ಇತಿಹಾಸದಲ್ಲಿ ನಿಂತಂಥ ಎಲ್ಲಾ ಸ್ಥಾನಗಳೂ ಕೂಡ ಅವರ ಅಧ್ಯಕ್ಷತೆಯಲ್ಲಿಯೇ ಆಯ್ಕೆಯಾಗಿತ್ತು. ಅವರ ಅಧಿಕಾರವನ್ನು ಸ್ವೀಕಾರ ಮಾಡಲಿಲ್ಲ. ಅಷ್ಟರಲ್ಲಿ. ಅವರು ಸಾವನ್ನು ಅಪ್ಪಬೇಕಾದಂಥ ಘಟನೆ ನಡೆದು ಹೋಯಿತು. ಬಹುಶಃ ಈ ಸಂದರ್ಭದಲ್ಲಿ ರಾಜ ಮನೆತನದವರ ಕೊಡುಗೆ ಏನಿದೆ ಅದನ್ನು ನಾವು ಕೂಡ ಸ್ಮರಿಸಿಕೊಳ್ಳುತ್ತೇವೆ. ಅದಕ್ಕೆ ತಕ್ಕಂತೆ ಅವರು ಪ್ರಜಾಪ್ರಭುತ್ವವಾದಿಗಳಾಗಿ, ಇಡೀ ಮೈಸೂರು ನಗರದಲ್ಲಿ ಅಲ್ಲದೆ ಅವರ ಪ್ರಾಂತ್ಯದಲ್ಲೇ ಎಲ್ಲಾ ರೀತಿಯಾದಂಥ ಬೆಳವಣಿಗೆಗಳಿಗೆ ಸದಾ ಚಿಂತನೆಯನ್ನು ಪ್ರಜಾಪ್ರಭುತ್ವವಾದಿಗಳಾಗಿ ಮಾಡುತ್ತಿದ್ದಂಥದನ್ನು ಈ ಸಂದರ್ಭದಲ್ಲಿ ನಾವು ಸ್ಮರಿಸಿಕೊಂಡು ಅದನ್ನು ಆದರ್ಶವಾಗಿಟ್ಟುಕೊಂಡು ಆಡಳಿತವನ್ನು ನಡೆಸಬೇಕೆಂದು ಯೋಚನೆ ಮಾಡಬೇಕಾಗಿದೆ.

ದಿವಂಗತ ಡಾ|| ಜಿ.ಎಸ್. ಶಿವರುದ್ರಪ್ಪ ರವರು, ನಾನು ಜೊತೆಯಾಗಿ ಹಲವಾರು ಕಾರ್ಯಕ್ರಮಮಗಳಲ್ಲಿ ಭಾಗವಹಿಸಿದ್ದೆವು. ಅವರು ಮಿತಿ ಭಾಷಿಯವರಾಗಿದ್ದರು. ಎಷ್ಟು ಬೇಕೋ ಅಷ್ಟನ್ನು ಮಾತನಾಡುತ್ತಿದ್ದರು. ಅವರಿಗೆ 87 ವರ್ಷವಾಗಿತ್ತು. ಅವರದ್ದು ತುಂಬು ಜೀವನ ಅವರದ್ದು ಕೂಡ ಸಾರ್ಥಕವಾದಂಥ ಬದುಕು ಎಂದು ನನಗನಿಸುತ್ತದೆ. ವೈಚಾರಿಕ ಚಿಂತನಾಶೀಲರಾಗಿದ್ದರು. ರಾಷ್ಟ್ರ ಕವಿಗಳಾಗಿದಂಥ ಮೂವರು ಕವಿಗಳಲ್ಲಿ ಮೊದಲನೆಯವರಾದ ಗೋವಿಂದ ಪೈ ಅವರು ಬದಲಾಗಿದ್ದರು. ಎರಡನೆಯವರು ಕುವೆಂಪುರವರಾಗಿದ್ದರು. ಮೂರನೆಯವರು ಡಾ|| ಜಿ.ಎಸ್. ಶಿವರುದ್ರಪ್ಪನವರಾಗಿದ್ದರು ಎಂದು ಮಾನ್ಯ ದತ್ತರವರು ಹೇಳುತ್ತಿದ್ದರು. ಅವರು ನಮ್ಮ ಸಭಾಧ್ಯಕ್ಷರು ಇರುವ ಜಿಲ್ಲೆಯಾದ ಶಿವಮೊಗ್ಗ ಜಿಲ್ಲೆಯಲ್ಲಿ ಜನಿಸಿದರು. ಆದರೆ ಅಳಿಯರಾದದ್ದು ಚಿಕ್ಕಮಗಳೂರು ಜಿಲ್ಲೆಯಲ್ಲಿ. ಇವರಿಬ್ಬರು ಕೂಡ ಮೈಸೂರಿನಲ್ಲಿ ಓದಿದರು ಎಂದು ನಾವು ಇಂದಿಗೂ ಹೆಮ್ಮೆಯಿಂದ ಹೇಳುತ್ತೇವೆ. ಮೈಸೂರು ಅವರ ಸಾಹಿತ್ಯಕ್ಕೆ ಸ್ಫೂರ್ತಿಯಾದಂಥ ನಗರವಾಗಿದೆ. ಮೈಸೂರು ಅವರ ಶಿಕ್ಷಣಕ್ಕೆ ಅವಕಾಶ ಕೊಟ್ಟಿ ಅವರನ್ನು ಉತ್ತಮವಾಗಿ ಬೆಳಸಿ ಆ ಕ್ಷೇತ್ರದಲ್ಲಿ ಒಂದು ಹೆಸರನ್ನು ಕೊಟ್ಟಿರುವಂಥದ್ದಕ್ಕೆ ನಾವು ಮೈಸೂರಿನವರು ಹೆಮ್ಮೆಪಡುತ್ತೇವೆ. ಕವಿ ಕುವೆಂಪುರವರು, ಡಾ|| ಜಿ.ಹೆಚ್. ಶಿವರುದ್ರಪ್ಪನವರು

ಇಬ್ಬರ ಬಗ್ಗೆಯೂ ನಾವು ಹೆಮ್ಮೆಯನ್ನು ಪಡುತ್ತೇವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕೂಡ ಆಗಿದ್ದರು. ನಾಡೋಜ ಪ್ರಶಸ್ತಿ ಬಂದಿತು. ಅವರು ರಾಷ್ಟ್ರ ಕವಿಗಳಾಗಿದ್ದರು. ವಿಶೇಷವೆಂದರೆ ದಿವಂಗತ ಪುಟ್ಟಣ್ಣ ಕಣಗಾಲ್ ರವರಂತೂ ಅವರ ಗೀತೆಗಳನ್ನು ಸಂದರ್ಭಕ್ಕೆ ತಕ್ಕಂತೆ ಅಷ್ಟು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಅಷ್ಟು ಅರ್ಥ ಪೂರ್ಣವಾದ, ಭಾವಪೂರ್ಣವಾದ ಗೀತೆಗಳನ್ನು ಶಿವರುದ್ರಪ್ಪ ರವರು ರಚನೆ ಮಾಡಿದ್ದರು. ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಹೆಸರನ್ನು ಮಾಡಿದ್ದಂತಹ ಶ್ರೀ ಅನಂತಮೂರ್ತಿಯವರು ಇವರ "ಎದೆ ತುಂಬಿ ಹಾಡುವೆನು" ಎಂಬ ಗೀತೆಯನ್ನು ಸುಗಮ ಸಂಗೀತಕ್ಕೆ ಬಳಸಿಕೊಂಡಿರುವುದನ್ನು ಇಂದಿಗೂ ಹತ್ತಾರು ಬಾರಿ ಕೇಳಬೇಕೆನಿಸುತ್ತದೆ. ನಾನು ಇದನ್ನು ಯಾವ ಸಂದರ್ಭದಲ್ಲಿ ಅವರು ಬರೆದಿದ್ದರೆಂದು ಕೇಳಿದೆ, ಅವರ ಗುರುಗಳಾದಂತಹ ಸಾತನೂರು ಶಾಮರಾಯರು, ತಳುಕಿನ ವೆಂಕಣ್ಣಯ್ಯ ರವರ ತಮ್ಮ, ಅಧ್ಯಾಪಕರಾಗಿದ್ದರು. ಶ್ರೀ ಶಿವರುದ್ರಪ್ಪನವರು ಬಡತನದಲ್ಲಿ ಬಂದಂತಹವರು. ಬಡತನದ ಬೇಗಯಿಂ‌ಟ ಕ್ಲಾಸಿನಲ್ಲಿ ಅವರು ನಿದ್ದೆ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಅವರನ್ನು ಎಬ್ಬಿಸಿ ಕರೆದುಕೊಂಡು ಹೋಗಿ ಯಾವ ರೀತಿ ಮುಂದೆ ವಿದ್ಯಾರ್ಥಿ ಜೀವನದಲ್ಲಿ ಕಷ್ಟವಿಲ್ಲದೆ ಅಭ್ಯಾಸ ಮಾಡಬೇಕೆಂದು ಹೇಳಿ ಸುತ್ತೂರು ಮಠದ ಶ್ರೀಗಳಿಗೆ ಪರಿಚಯ ಮಾಡಿಸಿಕೊಟ್ಟು, ಹಾಸ್ಟೆಲ್‌ನಲ್ಲಿ ಉಳಿಯುವ ಅವಕಾಶವನ್ನು ಕೂಡಾ ಮಾಡಿಕೊಟ್ಟರು. ಆ ನೆನಪಿನಲ್ಲಿ ಅವರನ್ನು ನೆನೆಸಿಕೊಂಡು ಈ ಹಾಡನ್ನು ಬರೆದು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಕುಳಿತು ಗುರುಗಳಿಗೆ ಹೇಳಿದ ಹಿನ್ನಲೆ ಇದೆ. ಅಂತಹ ಶ್ರೇಷ್ಟ ಚಿಂತಕರಾಗಿದ್ದವರು. ವಿಶೇಷವೆಂದು ಹೇಳಿದರೆ ಅವರು ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತಾರೆ. "ನನಗೆ ಯಾವುದೇ ಔಷದೋಪಚಾರ ಬೇಡ. ನನ್ನ ವಯೋವೃದ್ದಕ್ಕೆ ತಕ್ಕಂತೆ, ವಯಸ್ಸಿಗೆ ತಕ್ಕಂತೆ ನಾನು ಸಾವನ್ನಪ್ಪಬೇಕಾಗಿದೆ" ಎಂದು ಹೇಳುತ್ತಾರೆ. ಕೊನೆಯಲ್ಲಿ ಅವರು ಯಾವುದೇ ಜಾತಿಯ ಲಾಂಛನವಿಲ್ಲದೆ ನನ್ನ ಅಂತ್ಯಕ್ರಿಯೆಯಾಗಬೇಕೆಂದು ಹೇಳಿದ್ದಾರೆ. ಬಹಳ

ವಿಶೇಷ ನಮ್ಮಲ್ಲಿರುವಂತಹುದು, ಹೆಜ್ಜೆ–ಹೆಜ್ಜೆಗೂ, ಕೂದಲು–ಕೂದಲೆಳೆಗೂ ಜಾತಿಯನ್ನು ನೋಡುತ್ತೇವೆ. ಮನಸ್ಸಿಗೆ ಬಹಳ ನೋವಾಗುತ್ತದೆ. ಹಾಸನ ಜಿಲ್ಲೆಯ ಕುಮಾರಸ್ವಾಮಿಯವರು ಇಲ್ಲಿದ್ದಾರೆ, ನಿನ್ನೆ ಪತ್ರಿಕೆಯನ್ನು ನೋಡಿ ನನಗೆ ದಿಗ್ಭ್ರಮೆಯಾಯಿತು. ನಾವು ಯಾವ ಯುಗದಲ್ಲಿದ್ದೇವೆ? ನಾವು ನಾಳಿದ್ದು Republic Day function ನಲ್ಲಿ ಸಂವಿಧಾನದ ಆಚರಣೆ ಮಾಡುತ್ತಿದ್ದೇವೆ. ದಲಿತರು ದೇವಾಲಯದಲ್ಲಿ ಪೂಜೆ ಮಾಡುವುದಿರಲಿ, ಆ ಆವರಣಕ್ಕೆ ಹೋಗಬಾರದೆಂಬ ಅನಿಷ್ಟ ಪದ್ಧತಿ ವ್ಯವಸ್ಥೆ ಇದೆ. ಇವುಗಳ ಮಧ್ಯೆ ಡಾ॥ ಶಿವರುದ್ರಪ್ಪನವರು ನನಗೆ ಕಾಣುತ್ತಾರೆ. ಎಂತಹ ವೈಚಾರಿಕ ಚಿಂತನೆ ಅವರದು. ಮಾನವೀಯತೆಯ ನೆಲಗಟ್ಟಿನ ಮೇಲೆ ಕುವೆಂಪು ರವರ ವಿಶ್ವಮಾನವ ಸಂದೇಶವನ್ನು ಅನುಷ್ಠಾನಕ್ಕೆ ತರಬೇಕೆನ್ನುವಂತಹ ಚಿಂತನೆಗಳಲ್ಲಿ ಒಬ್ಬರಾಗಿದ್ದವರು ಡಾ॥ ಶಿವರುದ್ರಪ್ಪನವರು ಎಂಬುದನ್ನು ನನೆಸಿಕೊಳ್ಳಬೇಕು. ಅವರು ಎಲ್ಲರಿಗೂ ಆದರ್ಶಪ್ರಾಯರಾಗಿದ್ದಾರೆ. ನಮಗೆ ಪ್ರೇರೇಪಣೆ ಕೊಡುವಂತಹವರು. ಸಮಾಜಮುಖಿಯಾಗಿ ನಾವು ಚಿಂತನೆ ಮಾಡುವ ಹಿನ್ನೆಲೆಯಲ್ಲಿ ಯೋಚನೆ ಮಾಡುವಂತಹ ಆದರ್ಶ ಪುರುಷರಾಗಿದ್ದರು ಡಾ॥ ಜಿ.ಎಸ್. ಶಿವರುದ್ರಪ್ಪನವರು ಎಂದು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ.

ಅಕ್ಕಿನ್ನೇನಿ ನಾಗೇಶ್ವರರಾವ್ ರವರ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಚೆನ್ನಾಗಿ ಹೇಳಿದರು. ಆ ಕಾಲದಲ್ಲಿ ನಾವೆಲ್ಲರೂ ವಿದ್ಯಾರ್ಥಿಗಳಾಗಿದ್ದ ವೇಳೆಯಲ್ಲಿ ಇರಬಹುದು, ಎನ್.ಟಿ. ರಾಮರಾವ್ ಇರಬಹುದು, ಎಂ.ಜಿ. ರಾಮಚಂದ್ರನ್ ರವರು ಇರಬಹುದು, ನಮ್ಮಲ್ಲಿ ಇದ್ದಂತಹ ವರನಟ ಡಾ॥ ರಾಜ್‌ಕುಮಾರ್‌ರವರು ಇರಬಹುದು, ಇವರೆಲ್ಲರೂ ಕೂಡಾ ಚಲನಚಿತ್ರ ಕ್ಷೇತ್ರಕ್ಕೆ glamour field ನಲ್ಲಿ ತಮ್ಮದೇ ರೀತಿಯಲ್ಲಿ ವಿಶೇಷ ಪಾತ್ರಗಳಲ್ಲಿ ಅಭಿನಯಿಸಿ ಆ ಕ್ಷೇತ್ರದಲ್ಲಿ ಎಲ್ಲರ ಮೆಚ್ಚುಗೆಯನ್ನು ಗಳಿಸಿದ್ದಾರೆ. ಡಾ॥ ಅಕ್ಕಿನೈನಿ ನಾಗೇಶ್ವರರಾವ್ ರವರು ಚಲನಚಿತ್ರ ಕ್ಷೇತ್ರದ ಅತ್ಯಂತ ಉನ್ನತ ಪ್ರಶಸ್ತಿಯಾದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಪಡೆದಿದ್ದಾರೆ. ಪ್ರೇಮಾಭಿಷೇಕಂ, ದೇವದಾಸ್‌ನಲ್ಲಿ ಎಂತಹ ಅದ್ಭುತವಾದ ನಟನೆಯನ್ನು

ಮಾಡಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅವರೂ ಕೂಡಾ ಚಲನಚಿತ್ರ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟು ಅಪಾರ ಜನ ಮನ್ನಣೆಯನ್ನು ಪಡೆದು, ಅವರದೇ ಆದ ಅಭಿಮಾನಿಗಳನ್ನು ಹೊಂದಿದ್ದಂತಹ ಅಕ್ಕಿನೈನಿ ನಾಗೇಶ್ವರರಾವ್‌ರವರು ಇಂದು ನಮ್ಮನ್ನು ಅಗಲಿದ್ದಾರೆ.

ಇನ್ನು ಯಶವಂತ ಹಳಬಂಡಿರವರು ನಿನ್ನೆ ಹೃದಯಘಾತದಿಂದ ಸಾವನ್ನಪ್ಪಿದ್ದಾರೆಂಬುದನ್ನು ನಮಗೆ ಯಾರಿಗೂ ನಂಬುವುದಕ್ಕೆ ಆಗುವುದಿಲ್ಲ. ಇಂದು ಅವರಿಗೆ ಸಂತಾಪ ಸೂಚಿಸುತ್ತೇವೆಂದು ನಾವು ಯಾರೂ ನಿರೀಕ್ಷೆ ಮಾಡಿರಲಿಲ್ಲ. Birth is an accident, death is certain ಎಂದು ಹೇಳುತ್ತೇವೆ, ಹುಟ್ಟುವುದು ಆಕಸ್ಮಿಕ, ಸಾವು ಖಚಿತ ಎಂಬಂತೆ ಹುಟ್ಟುತ್ತಲೇ ಸಾವು ನಮ್ಮ ಬೆನ್ನ ಹಿಂದೆಯೇ ಇರುತ್ತದೆ. ಸಾವು ಯಾವಾಗ ಬರುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅವರು ಸಣ್ಣ ವಯಸ್ಸಿನಲ್ಲಿ ತೀರಿಕೊಂಡಿದ್ದನ್ನು ನೋಡಿದಾಗ ಬಹಳ ಮನಸ್ಸಿಗೆ ನೋವಾಗುತ್ತದೆ. ಆದರೆ ಹುಟ್ಟು ಸಾವಿನ ಮಧ್ಯೆ ಯಾವುದಾದರೂ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಬೇಕೆಂಬುದನ್ನು, ಮನುಷ್ಯನನ್ನು ಇನ್ನೊಬ್ಬ ಮನುಷ್ಯ ಅರ್ಥ ಮಾಡಿಕೊಳ್ಳಬೇಕಾದುದು, ಯಾವುದಾದರೂ ಕ್ಷೇತ್ರದಲ್ಲಿ ಏನಾದರೂ ಸಾಧನೆಯನ್ನು ನಾವು ಮಾಡಬೇಕು. ಇವರು ಸುಗಮ ಸಂಗೀತದಲ್ಲಿ ಉತ್ತಮ ಹಾಡುಗಾರರಾಗಿದ್ದರು. ಅದರಲ್ಲಿಯೂ ವಿಶೇಷವಾಗಿ ದ.ರಾ. ಬೇಂದ್ರೆಯವರ ಗೀತೆಗಳನ್ನು ಬಹಳಷ್ಟು ಜನಪ್ರಿಯಗೊಳಿಸಿದವರು. ಆಕಾಶವಾಣಿಯಲ್ಲಿ ಅವರು ಹಾಡಿದಂತಹ ಅವರ ಸಿರಿಕಂಠದಿಂದ ಕೇಳಿದ ಸುಗಮ ಸಂಗೀತದ ಹಾಡು, ಅದನ್ನು ನಿನ್ನೆಯೂ ಕೂಡಾ ಓದುತ್ತಿದ್ದೆ. ದ.ರಾ. ಬೇಂದ್ರೆಯವರ ಹಾಡನ್ನು ಅತ್ಯಂತ ಸುಂದರವಾಗಿ, ಸುಮಧುರ ಕಂಠದಲ್ಲಿ ಹಾಡುತ್ತಿದ್ದಂತಹ "ಪಾತರಗಿತ್ತಿ ಪಕ್ಕ ನೋಡಿದ್ಯೇನೆ ಅಕ್ಕ" ಎಂಬ ಹಾಡು ಬಹಳಷ್ಟು ಜನರನ್ನು ನಮ್ಮೆಲ್ಲರನ್ನೂ ಆಕರ್ಷಿಸಿದೆ. ಅವರು ಕೂಡಾ ಇಂದು untimely death, ಅಕಾಲಿಕ ಮರಣವನ್ನು ಅಪ್ಪಿದ್ದಾರೆ. ಇವರೆಲ್ಲರನ್ನೂ ಕೂಡಾ ಈ ಸದನದಲ್ಲಿ ಬಹಳ ಗೌರವಪೂರ್ವಕವಾಗಿ ನೆನೆಸಿಕೊಂಡು ಈ ಒಂದು ಸಂತಾಪ ಸೂಚನೆಯಲ್ಲಿ ನಾವೆಲ್ಲರೂ ಭಾಗವಹಿಸಿದ್ದೇವೆ. ಮಾನ್ಯ ಅಧ್ಯಕ್ಷರೆ, ತಾವು

ಮಂಡಿಸಿದಂತಹ ಈ ಸಂತಾಪ ಸೂಚನೆಗೆ ಇಡೀ ಸದನ ಮೃತರ ಕುಟುಂಬಕ್ಕೆ ಸಂತಾಪ ಸೂಚನೆಯನ್ನು ಸೂಚಿಸುವ ಮುಖಾಂತರ ಅವರೆಲ್ಲರಿಗೂ ಅತ್ಯಂತ ಗೌರವಪೂರ್ವ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆಂಬ ಮಾತನ್ನು ಹೇಳಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

(ಸದನದಲ್ಲಿ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನಾಚಾರಣೆ ಮಾಡಲಾಯಿತು.)

ಅಧ್ಯಕ್ಷರು:– ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಇಂದು ಬೆಳಿಗ್ಗೆ ಖಾಸಗಿ ಟಿ.ವಿ. ಚಾನೆಲ್‌ನಲ್ಲಿ . . .

ಅಧ್ಯಕ್ಷರು:– ನಾಳೆ ಇದನ್ನು ತೆಗೆದುಕೊಳ್ಳೋಣ. ಇದೊಂದು ಸಂಪ್ರದಾಯ.

ಶ್ರೀ ಪಿ. ರಾಜೀವ್:– ಮಾನ್ಯ ಸಭಾಧ್ಯಕ್ಷರೆ, ನಾನು ಆಸನದ ಬಗ್ಗೆ ಮಾತನಾಡುತ್ತಿದ್ದೇನೆ. ಇಂದು ಬಿ.ಜೆ.ಪಿ ಪಕ್ಷವನ್ನು ಅಧಿಕೃತ ವಿರೋಧ ಪಕ್ಷವೆಂದು ಆಯ್ಕೆ ಮಾಡಿದ್ದು ಆ ಪಕ್ಷದಲ್ಲಿ 44 ಸೀಟುಗಳಿವೆ. ಜೆ.ಡಿ.ಎಸ್. ಪಕ್ಷಕ್ಕೆ 40 ಜನ ಶಾಸಕರಿದ್ದಾರೆ. ಈ ಶಾಸನಸಭೆಗೆ ಮೂರನೇ ಅತಿ ದೊಡ್ಡ ಪಕ್ಷವಾಗಿ ಬಿ.ಎಸ್.ಆರ್ ಕಾಂಗ್ರೆಸ್ ಪಕ್ಷ ಇದ್ದು, 4 ಜನ ಸದಸ್ಯರನ್ನು ಒಳಗೊಂಡಿದೆ. ಅದರಲ್ಲಿ ಮೂರು ಜನರು ಪರಿಶಿಷ್ಟ ಪಂಗಡ ಹಾಗೂ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ನಮ್ಮ ಪಕ್ಷದ ಶಾಸಕರುಗಳಿಗೆ ಕೊನೆಯಲ್ಲಿ ಆಸನಗಳನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು:– ನಾಳೆ ಹೇಳಿ. ಇಂದೊಂದು ಸಂಪ್ರದಾಯವಿದೆ. ನೀವು ಯುವಕರಿದ್ದೀರಿ, ನಾಳೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಪಿ. ರಾಜೀವ್:- ಆಯಿತು.

ಅಧ್ಯಕ್ಷರು:- ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಸೂಚಿಸಲಾಗಿದೆ.

(ಸದನವನ್ನು 12 ಗಂಟೆ 38 ನಿಮಿಷಕ್ಕೆ ಮುಕ್ತಾಯಗೊಳಿಸಿ, ನಾಳೆ ದಿನಾಂಕ: 24.01.2014 ರಂದು ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಯಿತು.)